ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 258 RNI Number : KNKAN/25/A2770 01-10-2026 Thursday Page 04, Price 2/- suddinimmuru@gmail.com Mob:-8660146563

ಸಂಪುಟ:01 ಸಂಚಿಕೆ:258 ರಾಯಚೂರು 01-10-2026 ಗುರುವಾರ ಪುಟ 04 ಬೆಲೆ ರೂ.2/- ಮೊ:8660146563

ಅರ್ಧ ಹೆಲ್ಮೆಟ್ ಬಳಕೆ ನಿಷೇಧ

ಕೆಎಸ್ಆರ್‌ಟಿಸಿ ಬಸ್ ಪ್ರಯಾಣ ದರ ಪರಿಷ್ಕರಣೆ ಬಳಿಕ ನಿರ್ಧಾರ: ಅತುಲ್ ತಿವಾರಿ



ಬೆಂಗಳೂರು,ಸೆ.30– ಸರ್ಕಾರಿ ಸ್ವಾಮ್ಯದ ಸಾರಿಗೆ ನಿಗಮಗಳ ಬಸ್ ಪ್ರಯಾಣ ದರ ಹೆಚ್ಚಳಕ್ಕೆ ಸಂಬಂಧಿಸಿದಂತೆ ನೇಮಕಗೊಂಡಿರುವ ನಿವೃತ್ತ ಐಎಎಸ್ ಅಧಿಕಾರಿ ಅತುಲ್ ತಿವಾರಿ ನೇತೃತ್ವದ ಉನ್ನತ ಮಟ್ಟದ ಸಮಿತಿ ಒಂದೆರಡು ದಿನಗಳಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಲಿದೆ. ಈ ವರದಿ ಆಧರಿಸಿ ಸದ್ಯದಲ್ಲಿಯೇ ಕೆಎಸ್‌ಆರ್‌ಟಿಸಿ ಬಸ್ ಪ್ರಯಾಣ ದರ ಹೆಚ್ಚಳ ಮಾಡಲಾಗುತ್ತದೆ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ.

ನಗರದಲ್ಲಿಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರೊಂದಿಗೆ ರಾಜಧಾನಿಯ ಸಂಚಾರ ದಟ್ಟಣೆ ನಿಯಂತ್ರಣ, ರಸ್ತೆ ಸುರಕ್ಷತೆ ಹೆಚ್ಚಿಸುವುದು ಹಾಗೂ ಸಂಚಾರಿ ನಿಯಮಗಳ ಉಲ್ಲಂಘನೆಗೆ ಪರಿಣಾಮಕಾರಿಯಾಗಿ ಕಡಿವಾಣ ಹಾಕುವ ಸಂಬಂಧ ನಡೆದ ಸಭೆಯಲ್ಲಿ ಪಾಲ್ಗೊಂಡ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಅವರು ಮಾತನಾಡಿದರು. ಸಾರಿಗೆ ನಿಗಮಗಳು ಆರ್ಥಿಕವಾಗಿ ತೀವ್ರ ಸಂಕಷ್ಟ ಎದುರಿಸುತ್ತಿರುವುದರಿಂದ ಪ್ರಯಾಣ ದರವನ್ನು ಹೆಚ್ಚಳ ಮಾಡುವುದು ಅನಿವಾರ್ಯವಾಗಿದೆ ಎಂದು ಹೇಳಿದ್ದಾರೆ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಕಳೆದ ಒಂದು ವರ್ಷದಲ್ಲಿ ನಾಲ್ಕು ಬಾರಿ ಡೀಸೆಲ್ ಬೆಲೆ ಹೆಚ್ಚಳ ಮಾಡಿದೆ. ಇದರ ಪರಿಣಾಮ ಪ್ರತಿ ಲೀಟರ್ ಡೀಸೆಲ್ ಬೆಲೆ 15ರಿಂದ 16 ರೂಪಾಯಿ ಹೆಚ್ಚಳವಾಗಿದ್ದು, ನಮ್ಮ ಸಾರಿಗೆ ನಿಗಮಗಳಿಗೆ ವಾರ್ಷಿಕ 8 ಸಾವಿರ ಕೋಟಿ ರೂಪಾಯಿ ನಷ್ಟವಾಗುತ್ತಿದೆ ಎಂದು ಸಚಿವರು ತಿಳಿಸಿದ್ದಾರೆ.

ಸಿಎಂ ಅನುಮೋದನೆ ಬಳಿಕ ನಿರ್ಧಾರ: ಅತುಲ್ ತಿವಾರಿ ಅವರು ಎಲ್ಲಾ ಸಾರಿಗೆ ನಿಗಮಗಳ ಆರ್ಥಿಕ ಪರಿಸ್ಥಿತಿ ಬಗ್ಗೆ ಅಧ್ಯಯನ ನಡೆಸಿದ್ದು, ವರದಿ ನೀಡಲಿದ್ದಾರೆ. ಆ ವರದಿಯನ್ನು ಸಚಿವ ಸಂಪುಟ ಸಭೆಯಲ್ಲಿಟ್ಟು ಚರ್ಚಿಸಿ, ಮುಖ್ಯಮಂತ್ರಿಗಳ ಅನುಮೋದನೆ ಪಡೆದ ಬಳಿಕ ಪ್ರಯಾಣ ದರವನ್ನು ಪರಿಷ್ಕರಣೆ ಮಾಡಲಾಗುತ್ತದೆ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ಸ್ಪಷ್ಟಪಡಿಸಿದರು.2 ತಿಂಗಳಲ್ಲಿ ಶಕ್ತಿ ಕಾರ್ಡ್ ವಿತರಣೆ: ಮಹಿಳೆಯರಿಗೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡುವ ಶಕ್ತಿ ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಲು ಸರ್ಕಾರ ನಿರ್ಧರಿಸಿದೆ. ಇದರನ್ವಯ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಆಶಯದಂತೆ ಎಲ್ಲಾ ಮಹಿಳೆಯರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಮಾಡಲಾಗುತ್ತದೆ. ಅನ್ಯ ರಾಜ್ಯದ ಮಹಿಳೆಯರೂ ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡುತ್ತಿರುವ ಬಗ್ಗೆ ವರದಿಗಳು ಬರುತ್ತಿವೆ. ಇದನ್ನು ತಪ್ಪಿಸುವ ನಿಟ್ಟಿನಲ್ಲಿ ನಮ್ಮ ರಾಜ್ಯದ ಮಹಿಳೆಯರಿಗೆ ಮಾತ್ರ ಸೀಮಿತಗೊಳಿಸಲು ಮತ್ತು ಅವರ ಪ್ರಯಾಣವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಲು ಸ್ಮಾರ್ಟ್ ಕಾರ್ಡ್ ವ್ಯವಸ್ಥೆಯನ್ನು ಜಾರಿಗೆ ತರುತ್ತಿದ್ದೇವೆ ಎಂದು ಸಚಿವರು ಹೇಳಿದ್ದಾರೆ.

ಕಾಂಗ್ರೆಸ್ ಸೋತ ಕ್ಷೇತ್ರದಲ್ಲಿ ಜನತಾ ಜೋಡೋ ಯಾತ್ರೆ



ಶಿವಮೊಗ್ಗ,ಸೆ.30– ರಾಜ್ಯದಲ್ಲಿ ಕಾಂಗ್ರೆಸ್ ಸೋತ ಕ್ಷೇತ್ರಗಳಲ್ಲಿ ಜನರಿಗೆ ಅರಿವು ಮೂಡಿಸುವ ಸಲುವಾಗಿ ಭಾರತ್ ಜೋಡೋ ಯಾತ್ರೆಯ ನೆನಪಿಗಾಗಿ ಜನತಾ ಜೋಡೋ ಯಾತ್ರೆಯನ್ನು ನಡೆಸಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ತಿಳಿಸಿದ್ದಾರೆ.

ಶಿಕಾರಿಪುರ ವಿಧಾನಸಭಾ ಕ್ಷೇತ್ರದ ಈಸೂರು ಗ್ರಾಮದ ಸ್ವಾತಂತ್ರ್ಯ ಹೋರಾಟದ ಹುತಾತ್ಮರ ಸ್ಮಾರಕದಲ್ಲಿ ಮಾತನಾಡಿದ ಅವರು, ಜನತಾ ಜೋಡೋ ಜಾಗೃತಿ ಯಾತ್ರೆಯನ್ನು ಈಸೂರು ಗ್ರಾಮದಿಂದ ಪ್ರಾರಂಭಿಸುತ್ತಿದ್ದೇವೆ. ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಗ್ರಾಮ ಇದು. ಭಾರತ್ ಜೋಡೊ ಯಾತ್ರೆಯ ಸಲುವಾಗಿ ಇಂದು 6 ಜನ ಬಲಿದಾನವಾದ ಜಾಗದಿಂದ ಪಾದಯಾತ್ರೆ ನಡೆಸಲಾಗುತ್ತಿದೆ ಎಂದರು.

69 ಕ್ಷೇತ್ರಗಳಲ್ಲಿ ಜನತಾ ಜೋಡೊ ಜಾಗೃತಿ ಪಾದಯಾತ್ರೆ ಕಾರ್ಯಕ್ರಮವನ್ನು ನಡೆಸುತ್ತಿದ್ದೇವೆ. ಜನರನ್ನು ಮತದಾರರ ಪಟ್ಟಿಯಿಂದ ಕೈ ಬಿಟ್ಟು ಪ್ರಜಾಪ್ರಭುತ್ವದ ಕಗ್ಗೊಲೆ ನಡೆಸಲಾಗುತ್ತಿರುವ ವಿರುದ್ಧ ಯಾತ್ರೆ ನಡೆಸಲಾಗುತ್ತಿದೆ.

ಉದ್ಯೋಗ ಖಾತ್ರಿ ನಕಲಿ ಜಿಪಿಎಸ್ ಫೋಟೋ: ತನಿಖೆ ನಡೆಸಲು ಸಚಿವ ಈಶ್ವರ್ ಖಂಡ್ರೆ ಆದೇಶ



ಬೆಂಗಳೂರು,ಸೆ.30– ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೂಲಿ ಕಾರ್ಮಿಕರ ನಕಲಿ ಜಿಪಿಎಸ್ ಫೋಟೋ ತೆಗೆದು ವಂಚಿಸಲಾಗುತ್ತಿದೆ ಎಂಬ ವರದಿ ಹಿನ್ನೆಲೆಯಲ್ಲಿ, ಈ ಸಂಬಂಧ ತನಿಖೆ ನಡೆಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಖಂಡ್ರೆ ಆದೇಶ ನೀಡಿದ್ದಾರೆ.

ಇಲಾಖೆಯ ಕಾರ್ಯದರ್ಶಿಗಳಿಗೆ ಈ ಸಂಬಂಧ ಲಿಖಿತ ಸೂಚನೆ ನೀಡಿರುವ ಸಚಿವರು, ಕೊಪ್ಪಳ ಜಿಲ್ಲೆಯಲ್ಲಿ ಎಂದು ಸೂಚಿಸಿದ್ದಾರೆ. ಮೇಟಿಗಳು ಕಾಮಗಾರಿ ನಡೆಯುತ್ತಿರುವ ಸ್ಥಳಕ್ಕೆ ಕೆಲಸಗಾರರು ಹೋಗದಿದ್ದರೂ ವಿಡಿಯೋ ಚಿತ್ರೀಕರಣ ಮಾಡಿಸಿ, ಆ ವಿಡಿಯೋ ಪ್ಲೇ ಆಗುತ್ತಿರುವಾಗ ಮತ್ತೊಂದು ಮೊಬೈಲ್‌ನಲ್ಲಿ ಜಿಪಿಎಸ್ ಫೋಟೋ ತೆಗೆಸಿ ವಂಚಿಸುತ್ತಿದ್ದಾರೆ ಎಂದು ಮಾಧ್ಯಮದಲ್ಲಿ ವರದಿಯಾಗಿದೆ. ಈ ಬಗ್ಗೆ ಜಂಟಿ ನಿರ್ದೇಶಕರ ದರ್ಜೆಯ ಅಧಿಕಾರಿಯಿಂದ ತನಿಖೆ ನಡೆಸಿ 4 ದಿನಗಳ ಒಳಗಾಗಿ ವರದಿ ಸಲ್ಲಿಸಬೇಕು

ರೈತರ ಪಂಪ್‌ಸೆಟ್‌ಗಳಿಗೆ 12 ತಾಸು ವಿದ್ಯುತ್ ನೀಡಿ: ಜೆಡಿಎಸ್

ಎಕರೆಗೆ 25 ಸಾವಿರ ಬರಪರಿಹಾರ, ಸಾಲಮನ್ನಾ; ಪ್ರತಿ ಹೋಬಳಿಗೆ ಗೋಶಾಲೆ ತೆರೆಯಲು ಆಗ್ರಹ



ರಾಯಚೂರು, ಸೆ.30: ರಾಯಚೂರು ಗ್ರಾಮೀಣ ಕ್ಷೇತ್ರದ ರೈತರ ಪಂಪ್‌ಸೆಟ್‌ಗಳಿಗೆ ಪ್ರತಿದಿನ 12 ತಾಸು ನಿರಂತರ ವಿದ್ಯುತ್ ಪೂರೈಸಬೇಕು, ಬರಪರಿಹಾರವಾಗಿ ಪ್ರತಿ ಎಕರೆಗೆ 25 ಸಾವಿರ ನೀಡಬೇಕು, ರೈತರ ಸಾಲಮನ್ನಾ ಮಾಡಬೇಕು ಹಾಗೂ ಪ್ರತಿ ಹೋಬಳಿಗೆ ಒಂದು ಗೋಶಾಲೆ ತೆರೆಯಬೇಕು ಎಂದು ಒತ್ತಾಯಿಸಿ ಜೆಡಿಎಸ್ ಜಿಲ್ಲಾ ಘಟಕದ ವತಿಯಿಂದ ಬುಧವಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಬಸವೇಶ್ವರ ವೃತ್ತದವರೆಗೆ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ನಡೆಸಿದರು. ಈ ವೇಳೆ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ರೈತರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ದೇವದುರ್ಗ ಶಾಸಕಿ ಕರೆಮ್ಮ ನಾಯಕ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ವಿವಿಧ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿ, ಅಧಿಕಾರಕ್ಕೆ ಬಂದ ಬಳಿಕ ಅವುಗಳ ಅನುಷ್ಠಾನದಲ್ಲಿ ತಾರತಮ್ಯ ಮಾಡುತ್ತಿದೆ ಎಂದು ಆರೋಪಿಸಿದರು. ರೈತರ ಸಮಸ್ಯೆಗಳಿಗೆ ಸರ್ಕಾರ ಪ್ರಾಮಾಣಿಕವಾಗಿ ಸ್ಪಂದಿಸುತ್ತಿಲ್ಲ ಎಂದು ದೂರಿದರು.

ರಾಜ್ಯದಲ್ಲಿ ಬರ ಪರಿಸ್ಥಿತಿ ನಿರ್ಮಾಣವಾಗಿದ್ದು, ರೈತರು ಬೆಳೆ ನಷ್ಟ, ಕೃಷಿ ವೆಚ್ಚ ಹೆಚ್ಚಳ ಹಾಗೂ ವಿದ್ಯುತ್ ಸಮಸ್ಯೆಯಿಂದ ಸಂಕಷ್ಟ ಎದುರಿಸುತ್ತಿದ್ದಾರೆ. ಬರಪೀಡಿತ ತಾಲೂಕುಗಳನ್ನು ಘೋಷಿಸಿರುವ ಹಿನ್ನೆಲೆಯಲ್ಲಿ ಪ್ರತಿ ಎಕರೆಗೆ ಕನಿಷ್ಠ 25 ಸಾವಿರ ಪರಿಹಾರ ನೀಡಬೇಕು. ಕೇವಲ ಸಾಂಕೇತಿಕ ಪರಿಹಾರ ನೀಡುವುದರಿಂದ ರೈತರ ನಷ್ಟ ಭರಿಸಲು ಸಾಧ್ಯವಿಲ್ಲ. ಬೆಳೆ ನಷ್ಟವನ್ನು ವೈಜ್ಞಾನಿಕವಾಗಿ ಅಂದಾಜಿಸಿ, ಅದಕ್ಕೆ ಅನುಗುಣವಾಗಿ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಮಡಿವಾಳ ಮಾಚಿದೇವ ಸಮಾಜದ ಅಧ್ಯಕ್ಷರ ಆಯ್ಕೆ ನಿಯಮಬಾಹಿರ

ನೂತನ ಅಧ್ಯಕ್ಷರ ಆಯ್ಕೆ ಒಪ್ಪುವುದಿಲ್ಲ: ಜಂಬಣ್ಣ ಯಕ್ಲಾಸಪೂರ ಆರೋಪ



ರಾಯಚೂರು, ಸೆ.30: ಜಿಲ್ಲಾ ಮಡಿವಾಳ ಮಾಚಿದೇವ ಸಮಾಜದ ನೂತನ ಅಧ್ಯಕ್ಷರಾಗಿ ಯು. ಅಂಜಿನಯ್ಯ ಹಾಗೂ ಗೌರವ ಅಧ್ಯಕ್ಷರಾಗಿ ಬಿ. ವಿರುಪಾಕ್ಷಿ ಅವರನ್ನು ಆಯ್ಕೆ ಮಾಡಿರುವುದು ನಿಯಮಬಾಹಿರವಾಗಿದೆ ಎಂದು ಜಿಲ್ಲಾ ಮಡಿವಾಳ ಮಾಚಿದೇವ ಸಮಾಜದ ಅಧ್ಯಕ್ಷ ಜಂಬಣ್ಣ ಯಕ್ಲಾಸಪೂರ ಆರೋಪಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸೆ.29ರಂದು ಸಮಾಜದ ಹಿರಿಯ ಮುಖಂಡ ಶಿವಮೂರ್ತಿ ಸೇರಿದಂತೆ ಕೆಲ ಮುಖಂಡರು ಸಮುದಾಯ ಭವನದಲ್ಲಿ ಏಕಾಏಕಿ ಸಭೆ ನಡೆಸಿ ನೂತನ ಪದಾಧಿಕಾರಿಗಳ ಆಯ್ಕೆ ಮಾಡಿದ್ದಾರೆ ಎಂಬ ಮಾಹಿತಿ ಪತ್ರಿಕೆಗಳು ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ತಿಳಿದುಬಂದಿದೆ. ಈ ಸಭೆ ಹಾಗೂ ಆಯ್ಕೆ ಪ್ರಕ್ರಿಯೆಯನ್ನು ಸಮಾಜ ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ ಎಂದರು.

ತಮ್ಮ ಅಧ್ಯಕ್ಷತೆಯಲ್ಲಿ ಸೆ.27ರಂದು ಸಮಾಜದ ಸಾಮಾನ್ಯ ಸಭೆ ಕರೆಯಲಾಗಿತ್ತು. ಆದರೆ, ಅದರ ಹೊರತಾಗಿಯೂ ಸೆ.29ರಂದು ಪ್ರತ್ಯೇಕ ಸಭೆ ನಡೆಸಿ ಅಧ್ಯಕ್ಷ ಹಾಗೂ ಗೌರವ ಅಧ್ಯಕ್ಷರನ್ನು

ಮಮದಾಪುರ ಪಿಕೆಪಿಎಸ್‌ನಲ್ಲಿ 7.61 ಲಕ್ಷ ಹಣ ದುರುಪಯೋಗ ಆರೋಪ

ಮರುಪಾವತಿಗೆ ಸಿದ್ಧ; ಹೆಚ್ಚುವರಿ ಹಣ ದುರುಪಯೋಗದ ಸುಳ್ಳು ಪ್ರಚಾರಕ್ಕೆ ಮಾನನಷ್ಟ ಮೊಕದ್ದಮೆ ಬಾಗ್ಲಿ ಎಚ್ಚರಿಕೆ



ರಾಯಚೂರು, ಸೆ.30: ಮಮದಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ತಮ್ಮ ಅವಧಿಯಲ್ಲಿ 7,61,029 ಹಣ ದುರುಪಯೋಗವಾಗಿರುವುದಾಗಿ ಉಲ್ಲೇಖಿಸಲಾಗಿದೆ. ವರದಿಯಲ್ಲಿರುವ ಮೊತ್ತವನ್ನು ತಮಗೆ ಬರಬೇಕಾದ ಗ್ರಾಚುಟಿ ಹಾಗೂ ಗಳಿಕೆ ರಜೆ ವೇತನದಲ್ಲಿ ಸರಿದೂಗಿಸಿಕೊಳ್ಳಲು ಸಿದ್ಧವಿದ್ದು, ಇದಕ್ಕಿಂತ ಹೆಚ್ಚಿನ ಹಣ ದುರುಪಯೋಗವಾಗಿದೆ ಎಂದು ಸುಳ್ಳು ಪ್ರಚಾರ ಮಾಡಿದರೆ ಮಾನನಷ್ಟ ಮೊಕದ್ದಮೆ ದಾಖಲಿಸುವುದಾಗಿ ಸಂಘದ ಮಾಜಿ ಕಾರ್ಯದರ್ಶಿ ಮಲ್ಲಪ್ಪ ಬಾಗ್ಲಿ ಎಚ್ಚರಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಂಘಕ್ಕೆ ಉದ್ದೇಶಪೂರ್ವಕವಾಗಿ ಯಾವುದೇ ಹಾನಿ ಮಾಡಿಲ್ಲ. ಲೆಕ್ಕಪರಿಶೋಧನಾ ವರದಿಗೆ ಸಂಬಂಧಿಸಿದಂತೆ ನ.17, 2025ರಂದು ಲಿಖಿತ ಸ್ಪಷ್ಟೀಕರಣ ನೀಡಿದ್ದು, ವರದಿಯಲ್ಲಿ ನಮೂದಿಸಿರುವ ಮೊತ್ತವನ್ನು ತಮ್ಮ ಗ್ರಾಚುಟಿ ಮತ್ತು ಗಳಿಕೆ ರಜೆ ವೇತನದಿಂದ ಸರಿದೂಗಿಸಿಕೊಳ್ಳುವಂತೆ ಮನವಿ ಮಾಡಿರುವುದಾಗಿ ತಿಳಿಸಿದರು.

ತಮಗೆ ಸಂಘದಿಂದ ಗ್ರಾಚುಟಿ ಹಾಗೂ ಗಳಿಕೆ ರಜೆ ವೇತನ ಸೇರಿ 7,25,700 ಬರಬೇಕಿದೆ. ಲೆಕ್ಕಪರಿಶೋಧಕರ ವರದಿಯಲ್ಲಿ ಉಲ್ಲೇಖಿಸಿರುವ ಮೊತ್ತವನ್ನು ಇದರಲ್ಲಿ ಸರಿದೂಗಿಸಿಕೊಂಡು ಪ್ರಕರಣವನ್ನು ಇತ್ಯರ್ಥಪಡಿಸುವಂತೆ ಜು.30, 2026ರಂದು ಸಂಘದ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಸಹಕಾರ ಇಲಾಖೆಗೆ ಮನವಿ ಸಲ್ಲಿಸಿದ್ದಾಗಿ ಹೇಳಿದರು. ಉಳಿದ 35,329 ಮೊತ್ತವನ್ನು ಸ್ವಂತ ಹಣದಿಂದ

ಅಂಗನವಾಡಿ, ಶಾಲೆ, ವಸತಿ ನಿಲಯಗಳಿಗೆ ಸಿಇಒ ದಿಢೀರ್ ಭೇಟಿ ಪರಿಶೀಲನೆ



ರಾಯಚೂರು, ಸೆ.30: ಜಿಲ್ಲೆಯ ವಿವಿಧ ಗ್ರಾಮ ಪಂಚಾಯತಿಗಳಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ್ ಕುಮಾರ್ ಕಾಂದೂ ಅವರು ದಿಢೀರ್ ಭೇಟಿ ನೀಡಿ, ವಿವಿಧ ಅಭಿವೃದ್ಧಿ ಕಾಮಗಾರಿಗಳು ಹಾಗೂ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿದರು.

ಮೊದಲು ಮಾನ್ವಿ ತಾಲೂಕಿನ ಕುರ್ಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುರುಡಿ ಗ್ರಾಮಕ್ಕೆ ಭೇಟಿ ನೀಡಿ, ವಿಬಿ–ಜಿ ರಾಮ್‌ಜಿ ಯೋಜನೆಯಡಿ ನಡೆಯುತ್ತಿರುವ ಕಾಮಗಾರಿಯನ್ನು ಪರಿಶೀಲಿಸಿದರು. ಎನ್‌ಎಂಆರ್ ಮೂಲಕ ಕೂಲಿ ಕಾರ್ಮಿಕರ ಹಾಜರಾತಿ ಹಾಗೂ ಕೆಲಸದ ಮಾಹಿತಿಯನ್ನು ಪಡೆದು, ಎನ್‌ಎಂಎಂಎಸ್ ಆನ್‌ಲೈನ್ ಹಾಜರಾತಿಯನ್ನು ಪರಿಶೀಲಿಸಿದರು. ಈ ವೇಳೆ ಕೂಲಿ ಕಾರ್ಮಿಕರೊಂದಿಗೆ ಸಂವಾದ ನಡೆಸಿ, ಅವರ ಸಮಸ್ಯೆಗಳನ್ನು ಆಲಿಸಿದರು.



ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನಿರಂತರವಾಗಿ ಉದ್ಯೋಗ ಒದಗಿಸುವಂತೆ ಕಾರ್ಮಿಕರು ಮನವಿ ಮಾಡಿದರು. ಅಲ್ಲದೆ, 125 ದಿನಗಳಿಗಿಂತ ಹೆಚ್ಚುವರಿ ಯಾಗಿ ಇನ್ನೂ 50 ದಿನಗಳ ಕೂಲಿ ಕೆಲಸ ಒದಗಿಸುವಂತೆ ಮನವಿ ಸಲ್ಲಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಿಇಒ ಅವರು, ಕಾರ್ಮಿಕರ ಮನವಿಯಂತೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ ಎಂದರು.

ಜನ ಶಿಕ್ಷಣ ಸಂಸ್ಥೆಯಿಂದ ಪ್ರೇರಣಾ ಕಾರ್ಯಕ್ರಮ

ಕೌಶಲ್ಯ ತರಬೇತಿಯಿಂದ ಸ್ವಾವಲಂಬಿ ಜೀವನ ಸಾಧ್ಯ



ಬಾಗಲಕೋಟೆ,ಸೆ.30-

ಕೌಶಲ್ಯ ತರಬೇತಿಯಿಂದ ಸ್ವಾವಲಂಬಿ ಜೀವನ ರೂಪಿಸಿಕೊಳ್ಳಲು ಸಾಧ್ಯವಿದ್ದು, ಜನ ಶಿಕ್ಷಣ ಸಂಸ್ಥೆಯ ಮೂಲಕ 2004- 05 ರಿಂದ ಇಲ್ಲಿಯವರೆಗೆ ಸುಮಾರು 40 ಸಾವಿರ ಜನರಿಗೆ ವಿವಿಧ ವೃತ್ತಿಕೌಶಲ್ಯ ತರಬೇತಿ ನೀಡಲಾಗಿದೆ ಎಂದು ಬಿ.ವಿ.ವಿ. ಸಂಘದ ಗೌರವ ಕಾರ್ಯದರ್ಶಿ ಮಹೇಶ ಎನ್. ಅಥಣಿ ಹೇಳಿದರು.

ನಗರದ ವಿದ್ಯಾಗಿರಿಯ ಆರ್-ಸೆಟ್ ಸಭಾಭವನದಲ್ಲಿ ಮಂಗಳವಾರ ಬಿ.ವಿ.ವಿ. ಸಂಘದ ಜನ ಶಿಕ್ಷಣ ಸಂಸ್ಥೆ ವತಿಯಿಂದ ಕೇಂದ್ರ ಸರ್ಕಾರದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ಸಚಿವಾಲಯದ ಕಾರ್ಯಕ್ರಮದಡಿ ಆಯೋಜಿಸಿದ್ದ 'ಪ್ರೇರಣಾ ಕಾರ್ಯಕ್ರಮ ಕೌಶಲ್ಯ ತರಬೇತಿಯಿಂದ ಸ್ವಾವಲಂಬಿ ಜೀವನದ ಕಡೆಗೆ' ಹಾಗೂ ಹಳೆಯ ಕಲಿಕಾರ್ಥಿಗಳ ಸಮಾಗಮ ಮತ್ತು ಯಶಸ್ವಿ ಉದ್ಯಮಿಗಳ ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತರಬೇತಿ ಪಡೆದ ಕಲಿಕಾರ್ಥಿಗಳು ಆರ್ಥಿಕವಾಗಿ ಸಬಲರಾಗುವಂತೆ ಸಂಸ್ಥೆ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. ಬಿ.ವಿ.ವಿ. ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಸಿ. ಚರಂತಿಮಠ ಅವರು ಸಂಸ್ಥೆಯ ಮೂಲಕ ತರಬೇತಿ ಪಡೆದ ಸಾವಿರಾರು ಜನರು ಸ್ವ-ಉದ್ಯೋಗ ಕೈಗೊಳ್ಳುವಂತೆ ಪ್ರೇರಣೆ ನೀಡುತ್ತಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಎನ್.ವೈ. ಬಸರಿಗಿಡದ, ಕಲಿಕಾರ್ಥಿಗಳು ವಿವಿಧ ಸರ್ಕಾರಿ ಯೋಜನೆಗಳ ಸದುಪಯೋಗ ಪಡೆದುಕೊಂಡು ಯಶಸ್ವಿ ಉದ್ಯಮಿಗಳಾಗಬೇಕು. ಸರ್ಕಾರದ ವಿವಿಧ ಯೋಜನೆಗಳು ಹಾಗೂ ಮೊಬೈಲ್ ಕ್ಯಾಂಟೀ ನ್‌ನಂತಹ ಕಾರ್ಯಕ್ರಮಗಳ ಪ್ರಯೋಜನ ಅರ್ಹರಿಗೆ ತಲು ಪುವಂತಾಗಬೇಕು ಎಂದು ಕರೆ ನೀಡಿದರು.


ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಹಾಗೂ ಬಿ.ವಿ.ವಿ. ಸಂಘದ ಸಲಹೆಗಾರರಾದ ಶ್ರೀಮತಿ ಮೀನಾ ಚಂದಾವರಕರ ಮಾತನಾಡಿ, ಸಶಕ್ತೀಕರಣ ಹಾಗೂ ಆತ್ಮನಿರ್ಭರ ಭಾರತದ ಕನಸು ನನಸಾಗಬೇಕಾದರೆ ಕಲಿಕಾರ್ಥಿಗಳು ತರಬೇತಿಯ ಮೂಲಕ ಪಡೆದ ಕೌಶಲ್ಯವನ್ನು ಬಳಸಿಕೊಂಡು ತಮ್ಮದೇ ಆದ ಹೊಸ ಜೀವನ ಕಟ್ಟಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಜನ ಶಿಕ್ಷಣ ಸಂಸ್ಥೆಯಿಂದ ತರಬೇತಿ ಪಡೆದು ಯಶಸ್ವಿಯಾಗಿ ಉದ್ಯಮ ನಡೆಸುತ್ತಿರುವ 15 ಜನರನ್ನು ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆಯಲ್ಲಿ ಗ್ರಾಮೀಣಾಭಿವೃದ್ಧಿ ಪ್ರತಿಷ್ಠಾನದ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಬಿ.ಎಸ್. ಅಂಗಡಿ, ಜನ ಶಿಕ್ಷಣ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ವೀರಣ್ಣ ಜಿ. ಕಿರಗಿ ಹಾಗೂ ನಿರ್ದೇಶಕಿ ನಾಗರತ್ನಾ ಟಿ.ಎಂ. ಉಪಸ್ಥಿತರಿದ್ದರು. ಸಹಾಯಕ ಕಾರ್ಯಕ್ರಮಾಧಿಕಾರಿ ಯಲಗೂರೇಶ ಪಾಟೀಲ ನಿರೂಪಿಸಿದರು. ಕಾರ್ಯಕ್ರಮಾಧಿಕಾರಿ ಬಿ.ಕೆ. ಕೋರಿ ಸ್ವಾಗತಿಸಿದರು. ಕಂಪ್ಯೂಟರ್ ಆಪರೇಟರ್ ಸಂಗಮೇಶ ಪಾಟೀಲ ವಂದಿಸಿದರು.

ಕಾರ್ಯಕ್ರಮದಲ್ಲಿ ಜನ ಶಿಕ್ಷಣ ಸಂಸ್ಥೆಯ ಕಲಿಕಾರ್ಥಿಗಳು, ವೃತ್ತಿಬೋಧಕರು ಹಾಗೂ ಹಳೆಯ ಕಲಿಕಾರ್ಥಿಗಳು ಸೇರಿದಂತೆ 200ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಗೃಹಲಕ್ಷ್ಮಿ ಯೋಜನೆಯ ಸೌಲಭ್ಯ ಅರ್ಹ ಫಲಾನುಭವಿಗೆ ತಲುಪಲಿ -ಡಿಸಿ ಇಕ್ರಂ ಶರೀಫ್



ಕಲಬುರಗಿ,ಸೆ.30-

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಗೃಹಲಕ್ಷ್ಮಿ ಯೋಜನೆಯ ಸೌಲಭ್ಯವು ಜಿಲ್ಲೆಯ ಪ್ರತಿಯೊಬ್ಬ ನೈಜ ಹಾಗೂ ಅರ್ಹ ಫಲಾನುಭವಿಗೆ ತಲುಪಬೇಕು. ತಾಂತ್ರಿಕ ಕಾರಣ, ಆಧಾರ್ ಲಿಂಕ್ ಸಮಸ್ಯೆ ಅಥವಾ ದಾಖಲೆಗಳ ಸಣ್ಣಪುಟ್ಟ ಲೋಪಗಳಿಂದಾಗಿ ಯಾವುದೇ ಅರ್ಹ ಮಹಿಳೆ ಯೋಜನೆಯಿಂದ ವಂಚಿತರಾಗಬಾರದು ಎಂದು ಜಿಲ್ಲಾಧಿಕಾರಿ ಇಕ್ರಂ ಶರೀಫ್ ಹೇಳಿದರು.

ಸೋಮವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಗಂಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಮ್ಮಿಕೊಂಡಿರುವ ಗೃಹಲಕ್ಷ್ಮಿ ಯೋಜನೆಯ ಅರ್ಜಿ ಮರು ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಿಯಮಾವಳಿಗಳನ್ನು ಉಲ್ಲಂಘಿಸಿ ಸೌಲಭ್ಯ ಪಡೆಯುತ್ತಿರುವ ಅನರ್ಹರನ್ನು ತಡೆದು, ಪಾರದರ್ಶಕತೆ ಕಾಯ್ದುಕೊಳ್ಳಲು ಅಧಿಕಾರಿಗಳು ಮನೆ ಮನೆ ಪರಿಶೀಲನೆ ನಡೆಸಿ ಅರ್ಜಿಗಳ ಮರುಪರಿಶೀಲನೆಯನ್ನು ಅತ್ಯಂತ ಜವಾಬ್ದಾರಿಯಿಂದ ಪೂರ್ಣಗೊಳಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಹಾಗೂ ಜಿಲ್ಲಾ ಪಂಚಾ ಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಉಪಸ್ಥಿತಿಯಲ್ಲಿ ಯೋಜನೆಯ ಪ್ರಸ್ತುತ ಸ್ಥಿತಿಗತಿ ಕುರಿತು ವಿಸ್ತೃತ ಚರ್ಚೆ ನಡೆಸಲಾ ಯಿತು. ಜಿಲ್ಲೆಯಲ್ಲಿ ಪ್ರಸ್ತುತ ಸುಮಾ ರು 5.97 ಲಕ್ಷ ಫಲಾನುಭವಿಗಳು ನೋಂದಾಯಿಸಿಕೊಂಡಿದ್ದಾರೆ. ಕಳೆದ 36 ತಿಂಗಳ ಅವಧಿಯಲ್ಲಿ ಜಿಲ್ಲೆಗೆ ಪ್ರತಿ ತಿಂಗಳು ಸುಮಾರು 120 ಕೋಟಿ ರೂ.ಗಳಂತೆ ಒಟ್ಟು 4,000 ಕೋಟಿಗೂ ಅಧಿಕ ಹಣ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ತಲುಪಿದೆ. ಜಿಲ್ಲೆಯ 3,237 ಅಂಗನವಾಡಿ ಕೇಂದ್ರಗಳ 1,898 ಕಾರ್ಯಕರ್ತೆಯರು ಈ ಯೋಜನೆಯ ಯಶಸ್ವಿ ಅನುಷ್ಠಾನದಲ್ಲಿ ಭಾಗವಹಿಸುವರು. ಅಂಗನವಾಡಿ ಕಾರ್ಯಕರ್ತೆ ಯರು, ಆಶಾ ಸಿಬ್ಬಂದಿ ಹಾಗೂ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಜಂಟಿ ತಂಡವು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿಯೊಂದು ಮನೆಗೆ ತೆರಳಿ ಫಲಾನುಭವಿಗಳ ನೈಜತೆಯನ್ನು ತಪಾಸಣೆ ನಡೆಸುವರು. ಪ್ರತಿ ಮರಣ ಹೊಂದಿದ ಪ್ರಕರಣಗಳಲ್ಲಿ ಕುಟುಂಬಕ್ಕೆ ಬೇರೆ ಯಾವುದೇ ಜೀವನೋಪಾಯದ ಆದಾಯವಿಲ್ಲದಿದ್ದರೆ, ಅಂತಹ ಅರ್ಜಿಗಳನ್ನು ನಿಯಮಾನುಸಾರ ವಿಶೇಷವಾಗಿ ಮರು ಪರಿಶೀಲಿಸಿ ಅರ್ಹ ಮಹಿಳೆಯರಿಗೆ ನೆರವು ನೀಡಲು ನಿರ್ಧರಿಸಲಾಯಿತು. ಆಧಾರ್ ಆಧಾರಿತ ಫೇಸ್ ರೆಕಗ್ನಿ ಷನ್ ಮತ್ತು ಜಿಪಿಎಸ್ ಮ್ಯಾಪಿಂಗ್ ತಂತ್ರಜ್ಞಾನ ಹೊಂದಿರುವ ಮೊಬೈಲ್ ಆ್ಯಪ್ ಬಳಸಿ ಸ್ಥಳದಲ್ಲೇ ದಾಖಲೆ ಗಳನ್ನು ಪಾರದರ್ಶಕವಾಗಿ ತಪಾಸಣೆ ಮಾಡಲಾಗುತ್ತದೆ. ಕೆಲವು ದಿನಗಳಲ್ಲಿ ಈ ಆ್ಯಪ್ ಪ್ರಾರಂಭಿಸಲಾವುದು ಎಂದು ಅಧಿಕಾರಿಗಳು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಇಲಾಖಾಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಿ, ನಿಗದಿತ ಕಾಲಮಿತಿಯೊಳಗೆ ಮರು ಪರಿಶೀಲನೆ ಪೂರ್ಣಗೊಳಿಸಬೇಕೆಂದು ಜಿಲ್ಲಾಧಿಕಾರಿಗಳು ಆದೇಶಿಸಿದರು.

ಜಿಲ್ಲಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ ಎಸ್. ಸಂಕನೂರ, ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕರ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪನಿರ್ದೇಶಕರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಉಪಸ್ಥಿತರಿದ್ದರು.

ಯುವಜನೋತ್ಸವ-2026ರ ಎಚ್‌ಐವಿ ಜಾಗೃತಿಗೆ ಜಿಲ್ಲಾ ಮಟ್ಟದ ಮ್ಯಾರಥಾನ್



ಕಲಬುರಗಿ,ಸೆ.30-

ಎಚ್‌ಐವಿ/ಏಡ್ಸ್ ಕುರಿತು ಸಮಾಜದಲ್ಲಿರುವ ತಪ್ಪು ಪರಿಕಲ್ಪನೆಗಳನ್ನು ಹೋಗಲಾಡಿಸಲು ಯುವಜನೋತ್ಸ ವ ಮತ್ತು ಮ್ಯಾರಥಾನ್‌ನಂತಹ ಕ್ರೀಡಾ ಚಟುವಟಿಕೆಗಳು ಹಾಗೂ ವಿದ್ಯಾರ್ಥಿಗಳ ಪಾತ್ರ ಪ್ರಮುಖವಾಗಿದೆ,ಆರೋಗ್ಯಕರ ಹಾಗೂ ಎಚ್‌ಐವಿ ಮುಕ್ತ ಸಮಾಜ ನಿರ್ಮಾಣಕ್ಕೆ ಸಾರ್ವಜನಿಕರೆಲ್ಲರೂ ಕೈಜೋಡಿಸಬೇಕು ಎಂದು ವಿಭಾಗೀಯ ಜಂಟಿ ನಿರ್ದೇಶಕರ ಕಚೇರಿ ಸಹ ನಿರ್ದೇಶಕ ಡಾ. ಶಂಕ್ರಪ್ಪಾ ಮೈಲಾರಿ ಹೇಳಿದರು.

ಮಂಗಳವಾರ ನಗರದ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಹಾಗೂ ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ತಡೆಗಟ್ಟುವ ಘಟಕ, ಜಿಲ್ಲಾ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ, ಎನ್.ಎಸ್.ಎಸ್. ಘಟಕ ಇವರುಗಳ ಸಂಯುಕ್ತಾಶ್ರಯದಲ್ಲಿ ಯುವಜನೋತ್ಸ ವ-2026ರ ಅಂಗವಾಗಿ ಹೆಚ್.ಐ.ವಿ/ಏಡ್ಸ್ ನಿಯಂತ್ರಣಕ್ಕಾಗಿ 5 ಕಿ. ಮೀ ಜಿಲ್ಲಾ ಮಟ್ಟದ ಮ್ಯಾರಥಾನ್ ಓಟದ ಸ್ಪರ್ಧೆಗೆ ನಗರದ ಸರ್ದಾರ್ ವಲ್ಲಭಾಯಿ ಪಟೇಲ್ ವೃತ್ತದಲ್ಲಿ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಓಟದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಸರ್ದಾರ್ ವಲ್ಲಭಾಯಿ ಪಟೇಲ್ ವೃತ್ತದಿಂದ ಆರಂಭಿಸಿ ಜಗತ್ ವೃತ್ತ ಹಾಗೂ ಗೋವಾ ಹೋಟೆಲ್ ಮಾರ್ಗವಾಗಿ ಆನಂದ್ ಹೋಟೆಲ್ ತಲುಪಿ, ಮರಳಿ ಸರ್ದಾರ್ ವಲ್ಲಭಾಯಿ ಪಟೇಲ್ ವೃತ್ತಕ್ಕೆ ತಲುಪುವ ಮೂಲಕ ಮ್ಯಾರಥಾನ್ ಪೂರ್ಣಗೊಳಿಸಿದರು.

ಮ್ಯಾರಥಾನ್ ವಿಜೇತರಾದ ಅಜಯ್ ಹಾಗೂ ಅಂಬಿಕಾ ಪ್ರಥಮ 5,000 ರೂ. ಸಾಗರ ಹಾಗೂ ಸ್ವಪ್ನ ದ್ವಿತೀಯ 3,000 ರೂ. ಮತ್ತು ಇಮ್ರಾನ್ ಹಾಗೂ ಸಂಗೀತ ತೃತೀಯ ಬಹುಮಾನ 2,500 ರೂ. ಪಡೆದು ಜೊತೆಗೆ ಮೆಡಲ್, ಪ್ರಮಾಣಪತ್ರವನ್ನು ವಿತರಿಸಿದರು.

ಇದಕ್ಕೂ ಮುನ್ನ ಜಿಲ್ಲಾ ಕ್ಷಯರೋಗ ನಿರ್ಮೂಲನಾ ಹಾಗೂ ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಘಟಕ ಅಧಿಕಾರಿ ಡಾ. ಮಹ್ಮದ್ ಗಫಾರ್ ಅವರು ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿಭಾಗೀಯ ಕಚೇರಿಯ ಉಪನಿರ್ದೇಶಕ ಡಾ.ಅಂಬಾರಾಯ್ ರುದ್ರವಾಡಿ, ವಿಭಾಗೀಯ ಜಂಟಿ ಉಪ ನಿರ್ದೇಶಕ ಡಾ. ಶರಣಬಸಪ್ಪಾ ಗಣಜಲಖೇಡ್, ಮಲ್ಲಿಕಾರ್ಜುನ ಜಿ. ಬಿರಾದಾರ,ಹಾಗೂ ಜಿಲ್ಲಾ ಆರೋಗ್ಯ ಇಲಾಖೆಯ ಸಿಬ್ಬಂದಿ, ಈಆಅಕಇಖ ಸಂಸ್ಥೆಯ ಅಧಿಕಾರಿಗಳು ಮತ್ತು ಸಿಬ್ಬಂದಿ, ವಿವಿಧ ಸ್ವಯಂಸೇವಾ ಸಂಸ್ಥೆಗಳ (ಫಿಎಣ) ಪ್ರತಿನಿಧಿಗಳು, ಫೆಖಖ ಅಧಿಕಾರಿಗಳು, ರೆಡ್ ರಿಬ್ಬನ್ ಕ್ಲಬ್ ಅಧಿಕಾರಿಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ವಿಶ್ವ ರೇಬೀಸ್ ದಿನಾಚರಣೆ ಹಾಗೂ ಜಾಗೃತಿ ಕಾರ್ಯಕ್ರಮ



ಬೀದರ, ಸೆ.30-

ರೇಬೀಸ್ ರೋಗಮುಕ್ತ ಸಮಾಜ ನಿರ್ಮಾಣ ಮಾಡಲು ಸಾರ್ವಜನಿಕರಲ್ಲಿ ವ್ಯಾಪಕ ಜಾಗೃತಿ ಮೂಡಿಸುವುದು ಅತ್ಯಗತ್ಯ. ರೋಗ ಬಂದ ನಂತರ ಚಿಕಿತ್ಸೆ ಪಡೆಯುವುದಕ್ಕಿಂತ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವುದು ಹೆಚ್ಚು ಸೂಕ್ತ ಎಂದು ಬೀದರ್‌ನ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪಕ ಮಂಡಳಿಯ ಸದಸ್ಯರಾದ ಬಸವರಾಜ್ ಭತಮುರ್ಗೆ ಅವರು ಹೇಳಿದರು.

ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯದ (ವಿ.ಸಿ.ಬಿ.) ಆರೋಗ್ಯ ಕೇಂದ್ರ, ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ (ಅಲುಮ್ನಿ ಅಸೋಸಿಯೇಷನ್) ಹಾಗೂ ಹೈದರಾಬಾದ್‌ನ ಇಂಡಿಯನ್ ಇಮ್ಯುನೊಲಾಜಿಕಲ್ಸ್ ಲಿಮಿಟೆಡ್ ಇವುಗಳ ಜಂಟಿ ಸಹಯೋಗದಲ್ಲಿ ಆಯೋಜಿಸಲಾಗಿದ್ದ 20ನೇ ವಿಶ್ವ ರೇಬೀಸ್ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಫ್ರೆಂಚ್ ವಿಜ್ಞಾನಿ ಲೂಯಿ ಪಾಶ್ಚರ್ ಅವರ ಪುಣ್ಯಸ್ಮರಣೆಯ ಅಂಗವಾಗಿ ರೇಬೀಸ್ ರೋಗ ತಡೆಗಟ್ಟುವಿಕೆ ಮತ್ತು ನಿಯಂತ್ರಣದ ಕುರಿತು ವಿದ್ಯಾರ್ಥಿಗಳು, ವೃತ್ತಿಪರರು, ಬೋಧಕ ಸಿಬ್ಬಂದಿ, ಸಾಕುಪ್ರಾಣಿಗಳ ಮಾಲೀಕರು ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಪ್ರಮುಖ ಮೂರು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

ರೇಬೀಸ್ ರೋಗ ತಡೆಗಟ್ಟುವ ಮುನ್ನೆಚ್ಚರಿಕಾ ಕ್ರಮವಾಗಿ ಹೆಚ್ಚಿನ ಅಪಾಯ ಎದುರಿಸುವ (ಹೈ-ರಿಸ್ಕ್) ಗುಂಪಿನಲ್ಲಿರುವ ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿಗೆ ಉಚಿತ ರೇಬೀಸ್ ಮುನ್ನೆಚ್ಚರಿಕಾ ಲಸಿಕೆಯನ್ನು ನೀಡಲಾಯಿತು.

ಕಾರ್ಯಕ್ರಮದ ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಎಸ್‌ಆರ್‌ಡಿಡಿಎಲ್ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥರಾದ ಡಾ. ಶಿವರಾಜ್ ಮುರಗ್ ಅವರು ಮಾತನಾಡಿ, ಪ್ರಸಕ್ತ ಸಾಲಿನ ವಿಶ್ವ ರೇಬೀಸ್ ದಿನದ ಘೋಷವಾಕ್ಯ (ಥೀಮ್) ಒಟ್ಟಾಗಿ ಶ್ರಮಿಸೋಣ, ರೇಬೀಸ್ ಗೆಲ್ಲೋಣ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಹಾವಿದ್ಯಾಲಯದ ಡೀನ್ ಡಾ.ಎಂ.ಕೆ. ತಾಂಡಲೆ ಅವರು, ಪ್ರಾಣಿಗಳಲ್ಲಿ ರೇಬೀಸ್ ರೋಗವನ್ನು ತಡೆಗಟ್ಟುವುದರ ಮೂಲಕ ಮಾತ್ರ ಮಾನವರಲ್ಲಿ ಈ ರೋಗ ಹರಡುವುದನ್ನು ತಡೆಯಲು ಸಾಧ್ಯ. ಇದಕ್ಕೆ ಪ್ರತಿಯೊಬ್ಬರ ಸಹಕಾರ ಮತ್ತು ಒಗ್ಗಟ್ಟಿನ ಕೆಲಸ ಅತ್ಯಗತ್ಯ ಎಂದು ಒತ್ತು ನೀಡಿದರು.

ಕರ್ನಾಟಕ ಪಶುವೈದ್ಯಕೀಯ ವಿಶ್ವವಿದ್ಯಾಲಯದ ವ್ಯವಸ್ಥಾಪಕ ಮಂಡಳಿ (ಆಣಾಖ) ಸದಸ್ಯರಾದ ವಿಜಯಕುಮಾರ್ ಪಾಟೀಲ್ ಅವರು ಮಾತನಾಡಿ, ದಕ್ಷಿಣ ಭಾರತದಾದ್ಯಂತ ಅಗತ್ಯವಿರುವ ಲಸಿಕೆ ಪೂರೈಕೆ ಮಾಡುವಲ್ಲಿ ಬೆಂಗಳೂರಿನ ಐ.ಎ.ಹೆಚ್. ಮತ್ತು ವಿ.ಬಿ. (೦ಊಗಿಃ) ಸಂಸ್ಥೆಯು ವಹಿಸುತ್ತಿರುವ ಪ್ರಮುಖ ಪಾತ್ರವನ್ನು ಪ್ರಶಂಸಿಸಿದರು. ಈ ವಿಚಾರ ಸಂಕಿರಣದಲ್ಲಿ 80ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಬೋಧಕ ಸಿಬ್ಬಂದಿ ಪಾಲ್ಗೊಂಡಿದ್ದರು.

ಕಾರ್ಯಕ್ರಮದ ಕೊನೆಯಲ್ಲಿ ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಸಂಪನ್ಮೂಲ ವಿಜ್ಞಾನಿ ಡಾ.ಶಿವರಾಜ್ ಮುರಗ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರಿನ ಐ.ಎ.ಹೆಚ್. ಮತ್ತು ವಿ.ಬಿ. ಹಾಗೂ ಹಳೆಯ ವಿದ್ಯಾರ್ಥಿಗಳ ಸಂಘದ ಜಂಟಿ ಆಶ್ರಯದಲ್ಲಿ ಸಾಕುಪ್ರಾಣಿಗಳಿಗೆ ಉಚಿತ ರೇಬೀಸ್ ನಿರೋಧಕ ಲಸಿಕಾ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

ಈ ಲಸಿಕಾ ಅಭಿಯಾನದಲ್ಲಿ ಒಟ್ಟು 111 ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿಗೆ 0, 7 ಮತ್ತು 21 ದಿನಗಳ ವೇಳಾಪಟ್ಟಿಯ ಅನುಸಾರ ನೀಡಲಾಗುವ ಲಸಿಕೆಯ ಮೊದಲ ಡೋಸ್ (1ಠಿ ಈಟಿಠಿಛಿ) ಉಚಿತವಾಗಿ ನೀಡಲಾಯಿತು. ಅಲ್ಲದೆ, ಈ ಶಿಬಿರದಲ್ಲಿ ಸಾರ್ವಜನಿಕರ 40ಕ್ಕೂ ಹೆಚ್ಚು ಸಾಕುಪ್ರಾಣಿಗಳಿಗೂ ಉಚಿತವಾಗಿ ರೇಬೀಸ್ ನಿರೋಧಕ ಲಸಿಕೆಯನ್ನು ಹಾಕಲಾಯಿತು.

ಮಹಾವಿದ್ಯಾಲಯದ ಸಂಘಟನಾ ತಂಡದ ಪ್ರಮುಖರಾದ ಡಾ.ಎಂ.ಕೆ. ತಾಂಡಲೆ, ಡಾ.ಮಲ್ಲಿನಾಥ್ ಕೆ.ಸಿ., ಡಾ. ಭಗವಂತಪ್ಪ ಬಿ., ಡಾ.ಶೇಷರಾವ್, ಡಾ.ವೆಂಕನಗೌಡ ಟಿ., ಡಾ.ರೂಪಾಲಿ ಹಾಗೂ ವೈದ್ಯಾಧಿಕಾರಿ ಡಾ.ಶಹಮೀರ್ ಫಾತಿಮಾ ಅವರು ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸಿದರು.

ಐದೂವರೆ ತಿಂಗಳಿನವರೆಗಿನ ಗರ್ಭಪಾತ ಸೇವೆಯನ್ನು ಕಾನೂನಾತ್ಮಕವಾಗಿ ಪಡೆಯಲು ಸಲಹೆ



ಬೀದರ,,ಸೆ.29-

'ಅಂತರರಾಷ್ಟ್ರೀಯ ಸುರಕ್ಷಿತ ಗರ್ಭಪಾತ ದಿನಾಚರಣೆ'ಯು ಒಗ್ಗಟ್ಟಿನ ಕಾರ್ಯಾಚರಣೆಯ ಮೂಲಕ ಎಲ್ಲರಿಗೂ ಆಯ್ಕೆ ಮತ್ತು ಸೇವೆಗಳ ಲಭ್ಯತೆಯನ್ನು ಸಬಲೀಕರಣ ಗೊಳಿಸಬೇಕು. ಮಹಿಳೆಯು ಐದೂವರೆ ತಿಂಗಳಿನವರೆಗಿನ ಗರ್ಭಪಾತ ಸೇವೆಯನ್ನು ಕಾನೂನಾತ್ಮಕವಾಗಿ ಪಡೆಯಬಹುದು ಎಂದು ಬೀದರ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಅನೀಲ್ ಚಿಂತಾಮಣಿ ಹೇಳಿದರು.

ಬೀದರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಭಾಂಗಣದಲ್ಲಿ ಸೆ.29ರ ಮಂಗಳವಾರದಂದು ಅಂತರಾಷ್ಟ್ರೀಯ ಸುರಕ್ಷಿತ ಗರ್ಭಪಾತ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಂತರರಾಷ್ಟ್ರೀಯ ಸುರಕ್ಷಿತ ಗರ್ಭಪಾತ ದಿನಾಚರಣೆಯು ಒಗ್ಗಟ್ಟಿನ ಕಾರ್ಯಾಚರಣೆ: ಎಲ್ಲರಿಗೂ ಆಯ್ಕೆ ಮತ್ತು ಸೇವೆಗಳ ಲಭ್ಯತೆಯನ್ನು ಸಬಲೀಕರಣಗೊಳಿಸುವುದು ಎಂಬ ಘೋಷವಾಕ್ಯ ದೊಂದಿಗೆ ನಡೆಯುತ್ತಿದ್ದು,

ಗರ್ಭಧರಿಸಿದ ಎರಡು ತಿಂಗಳಿನವರೆಗೆ ಮಾತ್ರೆಗಳ ಮೂಲಕ ಗರ್ಭಪಾತದ ಸೌಲಭ್ಯ ವಿದೆ. ಮೂರು ತಿಂಗಳಿನವರೆಗೆ ಗರ್ಭಪಾತವು ಸುಲಭ ಮತ್ತು ಸುರಕ್ಷಿತ ಎಂದು ಅವರು ತಿಳಿಸಿದರು.

ಮನ್ನಾಎಖೇಳಿ ಸಮುದಾಯ ಆರೋಗ್ಯ ಕೇಂದ್ರದ ಸ್ತ್ರೀರೋಗ ತಜ್ಞರಾದ ಡಾ.ಶೀಲಾ ವಾಗಮಾರೆ ಮಾತನಾಡಿ, ಬೀದರ್ ತಾಲೂಕಿನ ಆಶಾ ಕಾರ್ಯಕರ್ತೆಯರಿಗೆ ಸುರಕ್ಷಿತ ಗರ್ಭಪಾತ ಹಾಗೂ ಅನಪೇಕ್ಷಿತ ಗರ್ಭಧಾರಣೆ ಕುರಿತು ಅರಿವು ಮೂಡಿಸಿದರು.

ಗರ್ಭಧರಿಸಿದ ಎರಡು ತಿಂಗಳಿನವರೆಗೆ ಮಾತ್ರೆಗಳ ಮೂಲಕ ಗರ್ಭಪಾತದ ಸೌಲಭ್ಯ, ಮೂರು ತಿಂಗಳಿನವರೆಗೆ ಗರ್ಭಪಾತವು ಸುಲಭ ಹಾಗೂ ಸುರಕ್ಷಿತ ಮತ್ತು ನಾಲ್ಕೂವರೆ ತಿಂಗಳಿನವರೆಗೆ ಗರ್ಭಪಾತ ಕಾನೂನುಬದ್ಧವಾಗಿದೆ. ವಿಶೇಷ ಸಂದರ್ಭಗಳಲ್ಲಿ ಮಹಿಳೆಯು ಐದೂವರೆ ತಿಂಗಳಿನವರೆಗಿನ ಗರ್ಭ ಪಾತ ಸೇವೆಯನ್ನು ಕಾನೂನಾತ್ಮ ಕವಾಗಿ ಪಡೆಯಬಹುದು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಪಿ.ಸಿ ಮತ್ತು ಪಿ.ಎನ್.ಡಿ.ಟಿ ನೋಡಲ್ ಅಧಿಕಾರಿ ಡಾ.ದಿಲೀಪ್ ಡೋಂಗ್ರೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ರಾಜಶೇಖರ್ ಪಾಟೀಲ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಶಿಕಲಾ ಬಿ.ಚಿನ್ನೂರ್, ಶಾಲು ಬಾಯಿ, ಮಹೇಶ್ವರ್ ರೆಡ್ಡಿ, ಮುದ ಸ್ಸರ್ ಮುಂತಾದವರು ಉಪಸ್ಥಿತ ರಿದ್ದರು.

ವಿಶ್ವ ಹೃದಯ ದಿನ: ವಿದ್ಯಾರ್ಥಿಗಳಿಗೆ ಹೃದಯ ಆರೋಗ್ಯದ ಕುರಿತು ಜಾಗೃತಿ



ಬಾಗಲಕೋಟೆ,ಸೆ.29-

ವಿಶ್ವ ಹೃದಯ ದಿನದ ಅಂಗವಾಗಿ ಬ.ವಿ.ವಿ. ಸಂಘದ ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ವೈದ್ಯಕೀಯ ಶಸ್ತ್ರಚಿಕಿತ್ಸಾ ಶುಶ್ರೂಷಾ ವಿಭಾಗದ ವತಿಯಿಂದ ಸೆ. 29ರಂದು ಅತಿಥಿ ಉಪನ್ಯಾಸ ಕಾರ್ಯಕ್ರಮ ಆಯೋಜಿ ಸಲಾಗಿತ್ತು. ಎಸ್. ನಿಜಲಿಂಗಪ್ಪ ಮೆಡಿಕಲ್ ಕಾಲೇಜು ಹಾಗೂ ಎಚ್.ಎಸ್.ಕೆ. ಆಸ್ಪತ್ರೆಯ ಹೃದ್ರೋಗ ತಜ್ಞ ಡಾ. ಸಮೀರಕುಮಾರ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ಹೃದಯಾಘಾತದ ಪ್ರಮುಖ ಕಾರಣಗಳು, ಲಕ್ಷಣಗಳು, ಪತ್ತೆ ಪರೀಕ್ಷೆಗಳು ಹಾಗೂ ಚಿಕಿತ್ಸಾ ವಿಧಾನಗಳ ಕುರಿತು ಮಾಹಿತಿ ನೀಡಿದರು. ಸಮತೋಲಿತ ಆಹಾರ, ನಿಯಮಿತ ವ್ಯಾಯಾಮ, ರಕ್ತದೊತ್ತಡ ಮಧುಮೇಹ ನಿಯಂತ್ರಣ, ಒತ್ತಡ ನಿರ್ವಹಣೆ ಹಾಗೂ ನಿಯಮಿತ ಆರೋಗ್ಯ ತಪಾಸಣೆ ಹೃದಯದ ಆರೋಗ್ಯಕ್ಕೆ ಮುಖ್ಯವೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ದಿಲೀಪ್ ಎಸ್. ನಾಟೇಕರ್ ಮಾತನಾಡಿ, ದೈಹಿಕ ನಿಷ್ಕ್ರಿಯತೆ ಹಾಗೂ ಅಸಮತೋಲಿತ ಆಹಾರ ಪದ್ಧತಿಯಿಂದ ಯುವ ಜನರಲ್ಲಿ ಹೃದಯ ಸಂಬಂಧಿ ಕಾಯಿಲೆಗಳ ಅಪಾಯ ಹೆಚ್ಚಾಗುತ್ತಿದೆ.

ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳುವ ಮೂಲಕ ಹೃದಯದ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಬೋಧಕ ಸಿಬ್ಬಂದಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಡಾ. ಶಾಂಭವಿ, ಪ್ರೊ. ವಾರೇಶ ಜಿ. ಚಿಲಾಪೂರ ಸೇರಿದಂತೆ ವಿವಿಧ ವಿಭಾಗಗಳ ಬೋಧಕರು ಉಪಸ್ಥಿತರಿ ದ್ದರು.

ಒಂದನೇಯ ಪುಟದಿಂದ

ನೂತನ ಅಧ್ಯಕ್ಷರ ಆಯ್ಕೆ ಒಪ್ಪುವುದಿಲ್ಲ

ಆಯ್ಕೆ ಮಾಡಿರುವುದು ಸರ್ವಾಧಿಕಾರಿ ಧೋರಣೆಯಾಗಿದೆ ಎಂದು ಶಿವಮೂರ್ತಿ ವಿರುದ್ಧ ಆರೋಪಿಸಿದರು.

ನಿಯಮಬಾಹಿರವಾಗಿ ನಡೆದಿರುವ ಈ ಆಯ್ಕೆಯ ಕುರಿತು ಸಂಘಗಳ ನೋಂದಣಿ ಅಧಿಕಾರಿ ಹಾಗೂ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿಗೆ ದೂರು ಸಲ್ಲಿಸಲಾಗುವುದು ಎಂದು ಜಂಬಣ್ಣ ಯಕ್ಲಾಸಪೂರ ತಿಳಿಸಿದರು.

ಈ ಸಂದರ್ಭದಲ್ಲಿ ಎಚ್. ಮುನಿಸ್ವಾಮಿ, ಲಕ್ಷ್ಮಣ, ಮಂಜುಳ, ಅಮರೇಶ ಸೇರಿದಂತೆ ಹಲವರು ಉಪಸ್ಥಿತರಿದ್ದರು.

12 ತಾಸು ವಿದ್ಯುತ್ ನೀಡಿ

ರಾಯಚೂರು ಗ್ರಾಮೀಣ ಕ್ಷೇತ್ರದಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ದಿನಕ್ಕೆ 12 ತಾಸು ನಿರಂತರ ವಿದ್ಯುತ್ ಪೂರೈಸಬೇಕು. ಸಮರ್ಪಕ ವಿದ್ಯುತ್ ಇಲ್ಲದೆ ರೈತರು ಬೆಳೆಗಳಿಗೆ ನೀರು ಹಾಯಿಸಲು ಸಾಧ್ಯವಾಗುತ್ತಿಲ್ಲ. ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾದರೆ ಬೆಳೆ ನಷ್ಟ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಆದ್ದರಿಂದ ಕೃಷಿ ಚಟುವಟಿಕೆಗಳಿಗೆ ಅಗತ್ಯವಿರುವಷ್ಟು ನಿರಂತರ ವಿದ್ಯುತ್ ನೀಡಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರೈತರ ಮೇಲಿನ ಸಾಲದ ಹೊರೆ ಹೆಚ್ಚಾಗಿದ್ದು, ಬೆಳೆ ನಷ್ಟದಿಂದ ಸಾಲ ತೀರಿಸುವುದು ಕಷ್ಟವಾಗಿದೆ. ಹೀಗಾಗಿ ರೈತರ ಸಾಲಮನ್ನಾ ಮಾಡಬೇಕು. ರೈತ ಕುಟುಂಬಗಳಿಗೆ ಪರಿಣಾಮಕಾರಿ ಆರ್ಥಿಕ ನೆರವು ಒದಗಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಇದರ ಜೊತೆಗೆ ಪ್ರತಿ ಹೋಬಳಿಗೆ ಒಂದು ಗೋಶಾಲೆ ಆರಂಭಿಸಬೇಕು. ಬರ ಪರಿಸ್ಥಿತಿಯಲ್ಲಿ ಜಾನುವಾರುಗಳಿಗೆ ಮೇವು ಮತ್ತು ನೀರಿನ ಕೊರತೆ ಎದುರಾಗದಂತೆ ಗೋಶಾಲೆಗಳಲ್ಲಿ ಮೇವು, ನೀರು ಹಾಗೂ ಪಶುವೈದ್ಯಕೀಯ ಸೌಲಭ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಉತ್ತರ ಕರ್ನಾಟಕದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ ಸ್ಥಳೀಯವಾಗಿ ಉದ್ಯೋಗ ಸೃಷ್ಟಿಸಬೇಕು. ಉದ್ಯೋಗಕ್ಕಾಗಿ ರೈತರು ಹಾಗೂ ಯುವಕರು ಗುಳೆ ಹೋಗುವ ಪರಿಸ್ಥಿತಿ ತಪ್ಪಿಸಲು ಸರ್ಕಾರ ವಿಶೇಷ ಯೋಜನೆ ರೂಪಿಸಬೇಕು ಎಂದು ಕರೆಮ್ಮ ನಾಯಕ ಹೇಳಿದರು.

ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ಆಡಳಿತಾವಧಿಯಲ್ಲಿ ರೈತರ ಸಾಲಮನ್ನಾ ಸೇರಿದಂತೆ ರೈತಪರ ಕ್ರಮಗಳಿಗೆ ಆದ್ಯತೆ ನೀಡಲಾಗಿತ್ತು ಎಂದು ಅವರು ಉಲ್ಲೇಖಿಸಿದರು. ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಕುಟುಂಬಗಳಿಗೆ ನೆರವು ನೀಡುವ ಮೂಲಕ ಮಾನವೀಯವಾಗಿ ಸ್ಪಂದಿಸಲಾಗಿತ್ತು ಎಂದರು.

ರೈತರ ಸಮಸ್ಯೆಗಳಿಗೆ ಸರ್ಕಾರ ಕೂಡಲೇ ಸ್ಪಂದಿಸಿ, ಬರಪರಿಹಾರ, ಸಾಲಮನ್ನಾ, 12 ತಾಸು ವಿದ್ಯುತ್ ಹಾಗೂ ಗೋಶಾಲೆಗಳ ಸ್ಥಾಪನೆ ಸೇರಿದಂತೆ ಪ್ರಮುಖ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯ ಬಳಿಕ ಜೆಡಿಎಸ್ ಮುಖಂಡರು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಪತ್ರ ಸಲ್ಲಿಸಿದರು. ರೈತರ ವಿವಿಧ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತಂದು, ತುರ್ತು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ, ಜೆಡಿಎಸ್ ಜಿಲ್ಲಾ ಅಧ್ಯಕ್ಷ ವಿರೂಪಾಕ್ಷಿ, ಮಹಾಂತೇಶ ಪಾಟೀಲ ಅತ್ತನೂರು, ವಕೀಲ ಶಿವಶಂಕರ್, ಲಕ್ಷ್ಮೀಪತಿ, ಸಣ್ಣ ನರಸಿಂಹ ನಾಯಕ, ರವಿಕುಮಾರ, ರಾಮನಗೌಡ ಏಗನೂರು, ನರಸಪ್ಪ ಆಶಾಪುರ, ರಾಜು ಸೇರಿದಂತೆ ಜೆಡಿಎಸ್ ಮುಖಂಡರು, ರೈತರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಉದ್ಯೋಗ ಖಾತ್ರಿ ನಕಲಿ ಜಿಪಿಎಸ್ ಪೋಟೋ: ತನಿಖೆ ನಡೆಸಲು ಆದೇಶ

ತಂತ್ರಜ್ಞಾನವನ್ನೇ ವಂಚಿಸಿ ಹಾಜರಾತಿ ಹಾಕದಂತೆ ತಡೆಗೆ ಕ್ರಮ: ಈ ರೀತಿ ನಕಲಿ ಜಿಪಿಎಸ್ ಪೋಟೋ ತೆಗೆದು ಪ್ರತಿನಿತ್ಯ 20-30 ಸಾವಿರ ರೂ. ವಂಚನೆ ಮಾಡುತ್ತಿದ್ದಾರೆ. ಕೆಲಸ ಮಾಡದೆಯೇ ಹಾಜರಾತಿ ಹಾಕಿಸುತ್ತಿದ್ದಾರೆ ಎಂದು ಮಾಧ್ಯಮದಲ್ಲಿ ವರದಿಯಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿರುವ ಸಚಿವ ಈಶ್ವರ್ ಖಂಡ್ರೆ, ವರದಿಯಲ್ಲಿನ ಅಂಶ ಸತ್ಯವಾಗಿದ್ದಲ್ಲಿ, ತಪ್ಪಿತಸ್ಥರ ವಿರುದ್ಧ ಕೈಗೊಳ್ಳಬೇಕಾದ ಶಿಫಾರಸಿನೊಂದಿಗೆ ವಾಸ್ತವಾಂಶದ ವರದಿಯನ್ನು ಸಲ್ಲಿಸುವಂತೆ ಮತ್ತು ಈ ರೀತಿ ತಂತ್ರಜ್ಞಾನವನ್ನೇ ವಂಚಿಸಿ ಹಾಜರಾತಿ ಹಾಕದಂತೆ ತಡೆಯಲು ಏನು ಕ್ರಮ ಕೈಗೊಳ್ಳಬಹುದು ಎಂಬ ಬಗ್ಗೆ ತಜ್ಞರೊಂದಿಗೆ ಸಮಾಲೋಚಿಸಿ ಉಪಕ್ರಮ ಕೈಗೊಳ್ಳುವಂತೆಯೂ ಸೂಚನೆ ನೀಡಿದ್ದಾರೆ.

ಯಂತ್ರಗಳ ಮೂಲಕ ಕಾಮಗಾರಿ ನಡೆಸಿ, ಕೂಲಿ ಕಾರ್ಮಿಕರ ಅಕ್ರಮ ಹಾಜರಾತಿ ಹಾಕಿಸುವುದನ್ನು ತಪ್ಪಿಸಲು ವಿಬಿ ಜಿ ರಾಮ್ ಜಿ ಅಡಿ ಕೂಲಿಗೆ ಬರುವವರು ಕಾಮಗಾರಿ ನಡೆಯುವ ಸ್ಥಳದಲ್ಲಿ ಕೆಲಸ ಮಾಡುತ್ತಿರುವ ಜಿಪಿಎಸ್ ಪೋಟೋ ತೆಗೆದು ಎನ್‌ಎಂಎಂಎಸ್ ಆಪ್‌ನಲ್ಲಿ ಅಪ್‌ಲೋಡ್ ಮಾಡುವುದನ್ನು ಕಡ್ಡಾಯ ಮಾಡಲಾಗಿದೆ. ಆದರೆ ಕೆಲವರು ಈ ತಂತ್ರಜ್ಞಾನಕ್ಕೆ ಸವಾಲು ಹಾಕಿದ್ದು, ಸರ್ಕಾರ ಈ ಬಗ್ಗೆ ಕ್ರಮಕ್ಕೆ ಮುಂದಾಗಿದೆ.

ಜನತಾ ಜೋಡೋ ಯಾತ್ರೆ

ಪ್ರಜಾಪ್ರಭುತ್ವದ ಕಗ್ಗೊಲೆ ನಡೆಯುತ್ತಿರುವ ಬಗ್ಗೆ ಜಾಗೃತಿ ಪಾದಯಾತ್ರೆ ನಡೆಸಲಾಗುತ್ತಿದೆ. ನಿರುದ್ಯೋಗ ಹಾಗೂ ಬೆಲೆ ಏರಿಕೆ ವಿರುದ್ಧ ಅಂಧ ಭಕ್ತರಾಗಬಾರದು ಎಂಬ ಜಾಗೃತಿ, ಬರಗಾಲದ ಕುರಿತು ಸರಿಯಾದ ಪರಿಹಾರವನ್ನು ಕೇಂದ್ರ ಸರ್ಕಾರ ನೀಡಬೇಕೆಂದು ಪಾದಯಾತ್ರೆ ಮಾಡಲಾಗುತ್ತಿದೆ. ಬರಗಾಲದ ಪರಿಹಾರದ ಕುರಿತು ಸಂಸದರ ಜೊತೆ ನಡೆಸಿ, ಪ್ರಧಾನ ಮಂತ್ರಿಯನ್ನು ಭೇಟಿ ಮಾಡಲು ಹೋದ್ರೆ ಅಲ್ಲಿ ಯಾರೂ ಬರಲಿಲ್ಲ. ಇದರಿಂದ ಸಂಸದರಿಗೆ ರಾಜ್ಯದ ಬಗ್ಗೆ ಯಾವುದೇ ಕನಿಕರ ಇಲ್ಲದಂತೆ ಆಗಿದೆ. ಇದರ ಕುರಿತು ಜಾಗೃತಿ ಮೂಡಿಸಲಾಗುತ್ತದೆ ಎಂದು ಹೇಳಿದರು.

ಕುಮಾರಸ್ವಾಮಿ ಹೇಳಿಕೆ ಕುರಿತು ಪ್ರತಿಕ್ರಿಯಿಸಿ, ಕೇಂದ್ರ ಸರ್ಕಾರ ಪಾಕಿಸ್ತಾನದಲ್ಲಿ ಇಲ್ಲ. ಕೇಂದ್ರ ಸರ್ಕಾರ ನಾವೇ ಆಯ್ಕೆ ಮಾಡಿದ ಸರ್ಕಾರವಾಗಿದೆ. ಕೇಂದ್ರ ಸರ್ಕಾರ ನಮಗೆ ಬರದ ಹಣ ನೀಡಿಲ್ಲ. ಕೇವಲ ನಮಗೆ ಬರಬೇಕಾದ ತೆರಿಗೆ ಹಣ ನೀಡಿದ್ರೆ ಸಾಕು. ಬಿಎಸ್‌ವೈ ಪುತ್ರ ಬಿ.ವೈ. ವಿಜಯೇಂದ್ರ ಅವರು ತಮ್ಮ ತಂದೆ ಹೆಸರಿನಲ್ಲಿ 17 ಕೋಟಿ ರೂ.ಗಳನ್ನು ಚೆಕ್ ರೂಪದಲ್ಲಿ ಪಡೆದುಕೊಂಡು ನಮಗೆ ನೀತಿ ಪಾಠ ಹೇಳುವುದು ಬೇಡ ಎಂದು ಕೆಪಿಸಿಸಿ ಅಧ್ಯಕ್ಷರು ಹರಿಹಾಯ್ದರು.

ಬಿ.ವೈ. ವಿಜಯೇಂದ್ರ ಅವರು ನಮ್ಮ ಪಕ್ಷದ ಬ್ಯಾನರ್, ಬಾವುಟ ಕಿತ್ತು ದುಸ್ಸಾಹಸ ಕೆಲಸ ಮಾಡಿದ್ದಾರೆ. ನಾವು ಇದರಲ್ಲಿ ಪಿಹೆಚ್‌ಡಿ ಮಾಡಿದ್ದೇವೆ. ಇಂತಹ ಕೆಲಸ ಮಾಡಿದ್ರೆ, ನಾವು ನಿಮ್ಮ ಒಂದು ಬ್ಯಾನರ್ ಕಟ್ಟಲು ಸಹ ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು. ಇವರೊಂದಿಗೆ ಸಚಿವರಾದ ಯತೀಂದ್ರ ಸಿದ್ದರಾಮಯ್ಯ, ಬಸವಂತಪ್ಪ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಆರ್.ಎಂ. ಮಂಜುನಾಥ ಗೌಡ, ಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ಶ್ರೀಕಾಂತ್, ಶಿಕಾರಿಪುರ ತಾಲೂಕು ಗ್ಯಾರಂಟಿ ಅಧ್ಯಕ್ಷ ನಾಗರಾಜ್ ಗೌಡ ಸೇರಿ ಇತರರು ಹಾಜರಿದ್ದರು.

ಭಾರತ್ ಜೋಡೋ ಯಾತ್ರೆಯು ಶಿಕಾರಿಪುರ ತಾಲೂಕು ಕಿಟ್ಟದಹಳ್ಳಿಯಿಂದ ಪ್ರಾರಂಭವಾಗಿದ್ದು, ಪಾದಯಾತ್ರೆಯಲ್ಲಿ ಸಾವಿರಾರು ಸಂಖ್ಯೆಯ ಕಾರ್ಯಕರ್ತರು ಹೆಜ್ಜೆ ಹಾಕುತ್ತಿದ್ದಾರೆ. ಪಾದಯಾತ್ರೆಯು ಶಿಕಾರಿಪುರದ ಪಟ್ಟಣದಲ್ಲಿ ಮುಕ್ತಾಯವಾಗಲಿದ್ದು, ಇಲ್ಲಿನ ನೂತನ ಸಂತೆ ಮೈದಾನದಲ್ಲಿ ಸಮಾವೇಶ ನಡೆಯಲಿದೆ.

ಅರ್ಧ ಹೆಲ್ಮೆಟ್ ಬಳಕೆ ನಿಷೇಧ

ಮೊದಲ ಹಂತದಲ್ಲಿ ಒಂದು ಕೋಟಿ ಮಹಿಳೆಯರಿಗೆ ಸ್ಮಾರ್ಟ್ ಕಾರ್ಡ್ ನೀಡುವ ದಿಸೆಯಲ್ಲಿ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದು, ಎರಡು ತಿಂಗಳಲ್ಲಿ ಸ್ಮಾರ್ಟ್ ಕಾರ್ಡ್ ಸಿದ್ಧವಾಗಲಿವೆ ಮತ್ತು ಮಹಿಳೆಯರಿಗೆ ಇವುಗಳನ್ನು ವಿತರಣೆ ಮಾಡಲಾಗುತ್ತದೆ ಎಂದು ಬೈರತಿ ಸುರೇಶ್ ತಿಳಿಸಿದರು.

ಬೆಂಗಳೂರಿಗೆ ಹಂತ-ಹಂತವಾಗಿ 4500 ಬಸ್: ಕೇಂದ್ರ ಸರ್ಕಾರದ ಸಹಯೋಗದಲ್ಲಿ 4,500 ಎಲೆಕ್ಟ್ರಿಕ್ ಬಸ್‌ಗಳನ್ನು ಬಿಎಂಟಿಸಿಗೆ ಪಡೆದುಕೊಳ್ಳಲು ನಿರ್ಧರಿಸಲಾಗಿದೆ. ಈ ಬಸ್?ಗಳು ಹಂತಹಂತವಾಗಿ ರಾಜಧಾನಿಯ ನಾಗರಿಕರ ಸೇವೆಗೆ ಲಭ್ಯವಾಗಲಿವೆ. ಈ ಬಸ್?ಗಳ ಸಂಚಾರದಿಂದ ನಗರದ ಸಾರಿಗೆ ದಟ್ಟಣೆ ಸಮಸ್ಯೆ ಸ್ವಲ್ಪಮಟ್ಟಿಗೆ ನಿವಾರಣೆಯಾಗಲಿದೆ ಎಂದು ಅಭಿಪ್ರಾಯಟ್ಟರು.

ಅರ್ಧ ಹೆಲ್ಮೆಟ್?ಗೆ ಅರ್ಧಚಂದ್ರ: ಇನ್ಮುಂದೆ ದ್ವಿಚಕ್ರ ವಾಹನ ಸವಾರರು ಸುರಕ್ಷಿತವಲ್ಲದ ಅರ್ಧ ಹೆಲ್ಮೆಟ್ ಅನ್ನು ಬಳಸುವಂತಿಲ್ಲ. ಈ ಅಸುರಕ್ಷಿತ ಅರ್ಧ ಹೆಲ್ಮೆಟ್ ಉತ್ಪಾದನೆ ಮತ್ತು ಬಳಕೆಯನ್ನು ನಿಷೇಧಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ಸಚಿವ ಬೈರತಿ ಸುರೇಶ್ ಇದೇ ವೇಳೆ ತಿಳಿಸಿದರು. ಈ ಸಂಬಂಧ ನಿಯಮ ರೂಪಿಸಿ ಅರ್ಧ ಹೆಲ್ಮೆಟ್ ತಯಾರಿಸುವ ಎಲ್ಲಾ ಕಾರ್ಖಾನೆಗಳ ವಿರುದ್ಧ ಕ್ರಮ ಜರುಗಿಸಲಾಗುತ್ತದೆ ಮತ್ತು ತಯಾರಿಕೆಯನ್ನು ಸ್ಥಗಿತಗೊಳಿಸಲಾಗುತ್ತದೆ ಎಂದು ಅವರು ಎಚ್ಚರಿಸಿದರು.

ಮೆಟ್ರೋ ರೈಲು ಕಾಮಗಾರಿ ಹಿನ್ನೆಲೆಯಲ್ಲಿ ಈ ಹಿಂದೆ ಬಿಎಂಟಿಸಿ ಸಂಚಾರಕ್ಕೆ ಇದ್ದ ಪ್ರತ್ಯೇಕ ಮಾರ್ಗವನ್ನು ರದ್ದುಪಡಿಸಲಾಗಿತ್ತು. ಇದೀಗ ಕಾಮಗಾರಿ ಪೂರ್ಣಗೊಂಡಿರುವ ರಸ್ತೆಗಳಲ್ಲಿ ಮತ್ತೆ ಪ್ರತ್ಯೇಕ ಪಥವನ್ನು ಪರಿಚಯಿಸಲಾಗುತ್ತದೆ. ಒನ್ ವೇಯಲ್ಲಿ ಸಂಚರಿಸಿದರೆ ಭಾರಿ ದಂಡ ವಿಧಿಸಲಾಗುತ್ತದೆ ಎಂದರು.

ದಂಡ 5,000 ರೂಪಾಯಿಗೆ ಹೆಚ್ಚಳ: ಪಾದಚಾರಿ ಮಾರ್ಗಗಳಲ್ಲಿ ವಾಹನಗಳನ್ನು ನಿಲ್ಲಿಸಿದರೆ ಈಗ ಇರುವ 500 ರೂಪಾಯಿ ದಂಡವನ್ನು 5,000 ರೂಪಾಯಿಗೆ ಹೆಚ್ಚಿಸಲು ನಿರ್ಧರಿಸಲಾಗಿದೆ. ಅದೇ ರೀತಿ ಒನ್ ವೇಯಲ್ಲಿ ವಾಹನ ಚಲಾಯಿಸಿದರೂ 5,000 ರೂಪಾಯಿ ದಂಡ ವಿಧಿಸಲಾಗುತ್ತದೆ ಎಂದು ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ.

ಅಕ್ಟೋಬರ 5 ರಂದು ಜಿಲ್ಲೆಗೆ ಕೇಂದ್ರ ಬರ ಅಧ್ಯಯನ ತಂಡ ಭೇಟಿ



ಬಾಗಲಕೋಟೆ,ಸೆ.30-

ಜಿಲ್ಲೆಯಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯನ್ನು ಪರಿಶೀಲಿಸಿ, ವಾಸ್ತವ ಸ್ಥಿತಿಗತಿಗಳ ಅಧ್ಯಯನ ನಡೆಸುವ ಉದ್ದೇಶದಿಂದ ಕೇಂದ್ರ ಬರ ಅಧ್ಯಯನ ತಂಡವು ಅಕ್ಟೋಬರ್ 5 ರಂದು ಬಾಗಲಕೋಟೆ ಜಿಲ್ಲೆಗೆ ಭೇಟಿ ನೀಡಲಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಮಂಗಳವಾರ ಜಿಲ್ಲೆಯ ಬರ ಪರಿಸ್ಥಿತಿ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಪಾಟ್ನಾದ ಭತ್ತ ಅಭಿವೃದ್ಧಿ ಇಲಾಖೆಯ ನಿರ್ದೇಶಕ ಮಾನ್ ಸಿಂಗ್ ಅವರ ನೇತೃತ್ವದ ಕೇಂದ್ರ ಬರ ಅಧ್ಯಯನ ತಂಡದಲ್ಲಿ ನವದೆಹಲಿಯ ವೆಚ್ಚ ಇಲಾಖೆಯ ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ ಪಾರ್ಥ ಪಾಲ್ ಹಾಗೂ ನವದೆಹಲಿಯ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ರಾಕೇಶ ಕುಮಾರ ಇದ್ದಾರೆಂದು ತಿಳಿಸಿದರು.

ಕೇಂದ್ರ ಬರ ಅಧ್ಯಯನ ತಂಡವು ಜಿಲ್ಲೆಯ ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಪ್ರಸಕ್ತ ಸಾಲಿನ ಮಳೆ ಪ್ರಮಾಣ, ಮಳೆ ಕೊರತೆಯಿಂದ ಉಂಟಾಗಿರುವ ಪರಿಸ್ಥಿತಿ, ಕೃಷಿ ಚಟುವಟಿಕೆಗಳ ಮೇಲಾದ ಪರಿಣಾಮ, ವಿವಿಧ ಬೆಳೆಗಳ ಸ್ಥಿತಿಗತಿ ಹಾಗೂ ಬೆಳೆ ಹಾನಿ ಸೇರಿದಂತೆ ಬರ ಪರಿಸ್ಥಿತಿಗೆ ಸಂಬಂಧಿಸಿದ ವಿವಿಧ ಅಂಶಗಳನ್ನು ಪರಿಶೀಲಿಸಲಿದೆ. ಅಲ್ಲದೆ, ಬರದಿಂದ ರೈತರು ಎದುರಿಸುತ್ತಿರುವ ಸಮಸ್ಯೆಗಳು, ಕೃಷಿ ಹಾಗೂ ಜಾನುವಾರು ಸಾಕಾಣಿಕೆ ಚಟುವಟಿಕೆಗಳ ಮೇಲಾದ ಪರಿಣಾಮ, ಕುಡಿಯುವ ನೀರು, ಜಾನುವಾರುಗಳಿಗೆ ಅಗತ್ಯವಿರುವ ಮೇವಿನ ಲಭ್ಯತೆ ಸೇರಿದಂತೆ ಬರ ಪರಿಸ್ಥಿತಿಗೆ ಸಂಬಂಧಿಸಿದ ಪ್ರಮುಖ ವಿಷಯಗಳ ಕುರಿತು ಅಧಿಕಾರಿ ಗಳಿಂದ ಮಾಹಿತಿ ಪಡೆಯಲಿದ್ದಾರೆಂದು ತಿಳಿಸಿದರು.

ತಂಡವು ಸ್ಥಳೀಯವಾಗಿ ಪರಿಶೀಲನೆ ನಡೆಸುವ ಸಂದರ್ಭದಲ್ಲಿ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಜಿಲ್ಲೆಯ ಬರ ಪರಿಸ್ಥಿತಿಯ ಸಮಗ್ರ ಮಾಹಿತಿಯನ್ನು ಒದಗಿಸಬೇಕು. ಮಳೆ ಕೊರತೆ, ಬಿತ್ತನೆ ಪ್ರದೇಶ, ಬೆಳೆಗಳ ಪ್ರಸ್ತುತ ಸ್ಥಿತಿ, ಹಾನಿಗೊಳಗಾದ ಪ್ರದೇಶ ಹಾಗೂ ರೈತರಿಗೆ ಉಂಟಾಗಿರುವ ತೊಂದರೆಗಳ ಕುರಿತು ಅಗತ್ಯ ದಾಖಲೆಗಳು ಮತ್ತು ಮಾಹಿತಿಯನ್ನು ಸಿದ್ದಪಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಕೇಂದ್ರ ತಂಡದ ಸ್ಥಳ ಪರಿಶೀಲನೆ ಹಾಗೂ ಅಧಿಕಾರಿಗಳಿಂದ ಪಡೆಯುವ ಮಾಹಿತಿಯ ಆಧಾರದ ಮೇಲೆ ಜಿಲ್ಲೆಯ ಬರ ಪರಿಸ್ಥಿತಿಯ ವಾಸ್ತವ ಚಿತ್ರಣವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಲು ಅನುಕೂಲವಾಗಲಿದೆ. ಬರದಿಂದ ಉಂಟಾಗಿರುವ ಪರಿಣಾಮಗಳ ಕುರಿತು ಸಮಗ್ರ ಅಧ್ಯಯನ ನಡೆಸಿ, ಅಗತ್ಯ ಪರಿಹಾರ ಹಾಗೂ ನೆರವು ಒದಗಿಸುವ ಸಂಬಂಧ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಕೆಯಾಗಲಿದ್ದು, ಕೇಂದ್ರ ಅಧ್ಯಯನ ತಂಡದ ಭೇಟಿ ಸಂದರ್ಭದಲ್ಲಿ ಸಂಬಂಧಿಸಿದ ಎಲ್ಲ ಇಲಾಖೆಗಳ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ, ತಂಡಕ್ಕೆ ಅಗತ್ಯ ಮಾಹಿತಿ ಹಾಗೂ ದಾಖಲೆಗಳನ್ನು ಒದಗಿಸುವಂತೆ ಜಿಲ್ಲಾಧಿಕಾರಿ ಸಂಗಪ್ಪ ಸೂಚಿಸಿದರು.

ಸಭೆಯಲ್ಲಿ ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಜಾನನ ಬಾಲೆ, ಉಪ ಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ, ಜಂಟಿ ಕೃಷಿ ನಿರ್ದೇಶಕ ಟಿ.ಎಸ್. ರುದ್ರೇಶಪ್ಪ, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ರವೀಂದ್ರ ಹಕಾಟಿ, ಜಿ.ಪಂ ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು ಅಲ್ಲಾಪೂರ, ಪಶು ಇಲಾಖೆಯ ಉಪನಿರ್ದೇಶಕ ಎಸ್.ಎಚ್. ಕರಡಿಗುಡ್ಡ, ಗ್ರಾಮೀಣ ಕುಡಿಯುವ ನೀರು ಯೋಜನೆಯ ಮುಖ್ಯ ಅಭಿಯಂತರ ಬಿರಾದಾರ ಸೇರಿದಂತೆ ಉಪವಿಭಾಗಾಧಿಕಾರಿಗಳು, ಆಯಾ ತಾಲೂಕಿನ ತಹಶೀಲ್ದಾರ ವಿಡಿಯೋ ಸಂವಾದದ ಮೂಲಕ ಉಪಸ್ಥಿತರಿದ್ದರು.

ಖಾಸಗಿ ಸಂಸ್ಥೆ ವಿತರಿಸುತ್ತಿರುವ 'ನಮ್ಮ ಕುಟುಂಬ' ಕಾರ್ಡ್‌ಗಳು ಯಶಸ್ವಿನಿ ಯೋಜನೆಯದ್ದಲ್ಲ: ಸಹಕಾರ ಇಲಾಖೆ ಸ್ಪಷ್ಟನೆ

ಕೊಪ್ಪಳ, ಸೆ.30-

ಜಿಲ್ಲೆಯ ಯಲಬುರ್ಗಾ ತಾಲೂಕಿನಲ್ಲಿ ಖಾಸಗಿ ಸಂಸ್ಥೆಯೊಂದು ವಿತರಿಸುತ್ತಿರುವ ಆರೋಗ್ಯ ಕಾರ್ಡ್‌ಗಳಿಗೂ ಸರ್ಕಾರದ ಅಧಿಕೃತ ಯಶಸ್ವಿನಿ ಯೋಜನೆಗೂ ಯಾವುದೇ ಸಂಬಂಧವಿಲ್ಲ ಎಂದು ಕೊಪ್ಪಳ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ಸಾರ್ವಜನಿಕರಿಗೆ ಸ್ಪಷ್ಟನೆ ನೀಡಿದ್ದಾರೆ.

ಸಹಕಾರ ಇಲಾಖೆಯು ಜಾರಿಗೊಳಿಸಿರುವ 'ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ'ಯು ಕೇವಲ ಸಹಕಾರ ಸಂಘಗಳು ಮತ್ತು ಸೌಹಾರ್ದ ಸಹಕಾರಿಗಳ ಸದಸ್ಯರಿಗೆ ಮಾತ್ರ ಅನ್ವಯವಾಗುವ ವಿಶೇಷ ಯೋಜನೆಯಾಗಿದೆ. ಇದರಡಿ ನೋಂದಾಯಿತ ಸದಸ್ಯರು ಯಾವುದೇ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ನಗದು ರಹಿತ ಚಿಕಿತ್ಸೆ ಪಡೆಯಲು ಅವಕಾಶವಿದೆ.

ಆದರೆ, ಇತ್ತೀಚಿನ ಪತ್ರಿಕಾ ಪ್ರಕಟಣೆಗಳ ಪ್ರಕಾರ ಧಾರವಾಡ ಜಿಲ್ಲೆಯ ಹುಬ್ಬಳ್ಳಿಯ ನಗರ/ಗ್ರಾಮೀಣ ಅಭಿವೃದ್ಧಿ ಸೇವಾ ಸಂಸ್ಥೆಯವರು ಯಲಬುರ್ಗಾ ತಾಲೂಕಿನ ಹಿರೇಮ್ಯಾಗೇರಿ ಗ್ರಾಮದಲ್ಲಿ 'ನಮ್ಮ ಕುಟುಂಬದ ಆರೋಗ್ಯ ಕಾರ್ಡ್'ಗಳನ್ನು ವಿತರಿಸುತ್ತಿರುವುದು ಕಂಡುಬಂದಿದೆ. ಈ ಕಾರ್ಡ್‌ಗಳು ಸಹಕಾರ ಇಲಾಖೆಯಿಂದ ಅಧಿಕೃತವಾಗಿ ಜಾರಿಗೊಳಿಸಲಾದ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯ ಕಾರ್ಡ್‌ಗಳಲ್ಲ. ಸಾರ್ವಜನಿಕರು ಈ ವ್ಯತ್ಯಾಸವನ್ನು ಗಮನಿಸಿ, ಯಾವುದೇ ರೀತಿಯ ಗೊಂದಲ ಅಥವಾ ವಂಚನೆಗೆ ಒಳಗಾಗಬಾರದು ಎಂದು ಕೊಪ್ಪಳ ಸಹಕಾರ ಸಂಘಗಳ ಉಪನಿಬಂಧಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಮೊದಲನೇ ಪುಟದಿಂದ......

ಸಿಇಒ ದಿಢೀರ್ ಭೇಟಿ ಪರಿಶೀಲನೆ

ನಂತರ ಆರೋಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ಕಾರಿ ಪ್ರೌಢ ಶಾಲೆಗೆ ಭೇಟಿ ನೀಡಿ, ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಹಾಜರಾತಿಯನ್ನು ಪರಿಶೀಲಿಸಿದರು. ನಿರಂತರ ಶಿಕ್ಷಣದ ಹಾಜರಾತಿ ಕುರಿತು ಮಾಹಿತಿ ಪಡೆದು, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ವಿದ್ಯಾರ್ಥಿಗಳಿಗೆ ಬಟ್ಟೆ, ಪುಸ್ತಕ ಸೇರಿದಂತೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳು ಸಮರ್ಪಕವಾಗಿ ವಿತರಿಸಲಾಗಿದೆಯೇ ಎಂಬುದನ್ನು ವಿಚಾರಿಸಿದರು.

ಶಾಲೆಯ ಬಿಸಿಯೂಟದ ಕೋಣೆಯನ್ನು ಪರಿಶೀಲಿಸಿದ ಅವರು, ನೂತನ ಅಡುಗೆ ಕೋಣೆಯನ್ನು ಸಮರ್ಪಕವಾಗಿ ಬಳಸುವಂತೆ ಸೂಚಿಸಿದರು. ವಿದ್ಯಾರ್ಥಿಗಳಿಗೆ ನೀಡಲಾಗುವ ಬಿಸಿಯೂಟವನ್ನು ಪರಿಶೀಲಿಸಿ, ಸ್ವತಃ ಊಟ ಸವಿದು ಗುಣಮಟ್ಟವನ್ನು ಪರಿಶೀಲಿಸಿದರು.

ಶಾಲೆಯಲ್ಲಿ ನಡೆಯುತ್ತಿರುವ ಕೆಜಿಎಂ ಕಾಮಗಾರಿಗಳನ್ನು ಅಕ್ಟೋಬರ್ 30ರೊಳಗೆ ಪೂರ್ಣಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸದಿದ್ದಲ್ಲಿ ಸಂಬಂಧಪಟ್ಟ ಗುತ್ತಿಗೆದಾರರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಬಳಿಕ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದ ಅವರು, ಮಕ್ಕಳ ಹಾಜರಾತಿ, ದಾಸ್ತಾನು ಹಾಗೂ ಮಕ್ಕಳಿಗೆ ಒದಗಿಸಲಾಗುತ್ತಿರುವ ಆಹಾರ ಮತ್ತು ಇತರೆ ಸೌಲಭ್ಯಗಳ ಕುರಿತು ಪರಿಶೀಲನೆ ನಡೆಸಿ ಮಾಹಿತಿ ಪಡೆದರು.

ನಂತರ ಮಾನ್ವಿ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿರುವ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಕ್ಕೆ ಭೇಟಿ ನೀಡಿ, ಮೆನು ಚಾರ್ಟ್ ಪ್ರಕಾರ ವಿದ್ಯಾರ್ಥಿನಿಯರಿಗೆ ಊಟ ನೀಡಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಿದರು. ವಿದ್ಯಾರ್ಥಿನಿಯರೊಂದಿಗೆ ಸಂವಾದ ನಡೆಸಿ, ಊಟದ ಗುಣಮಟ್ಟ ಹಾಗೂ ವಸತಿ ನಿಲಯದಲ್ಲಿನ ಸೌಲಭ್ಯಗಳ ಕುರಿತು ಮಾಹಿತಿ ಪಡೆದರು. ದಾಸ್ತಾನು ಕೊಠಡಿಯನ್ನು ಪರಿಶೀಲಿಸಿ, ವಿದ್ಯಾರ್ಥಿನಿಯರಿಗೆ ನೀಡಲಾಗುತ್ತಿದ್ದ ಊಟವನ್ನು ಸ್ವತಃ ಸವಿದು ಗುಣಮಟ್ಟವನ್ನು ಪರಿಶೀಲಿಸಿದರು.

ಇದೇ ಸಂದರ್ಭದಲ್ಲಿ ಮಾನ್ವಿ ತಾಲ್ಲೂಕಿನ ಹಳೆಯ ಪಂಚಾಯಿತಿ ಕಟ್ಟಡದಲ್ಲಿ ನಿರ್ಮಿಸಲಾಗಿರುವ ಅಕ್ಕ ಕೆಫೆಗೆ ಭೇಟಿ ನೀಡಿದ ಅವರು, ಅಕ್ಕ ಕೆಫೆಯ ಕುರಿತು ಸಾರ್ವಜನಿಕರಲ್ಲಿ ಹೆಚ್ಚಿನ ಅರಿವು ಮೂಡಿಸುವಂತೆ ಹಾಗೂ ಪ್ರಚಾರ ಕಾರ್ಯವನ್ನು ಕೈಗೊಳ್ಳುವಂತೆ ಸೂಚಿಸಿದರು. ಬಳಿಕ ಅಕ್ಕ ಕೆಫೆಯಲ್ಲಿ ಊಟ ಮಾಡಿದರು.

ಇದೇ ಸಂದರ್ಭದಲ್ಲಿ ತಾಲೂಕು ಪಂಚಾಯತ್ ಮಾನ್ವಿ ಕಾರ್ಯನಿರ್ವಾಹಕ ಅಧಿಕಾರಿ ಖಾಲೀದ್ ಅಹಮ್ಮದ್, ಸಹಾಯಕ ನಿರ್ದೇಶಕರಾದ ದೀಪಾ ಅರಳಿಕಟ್ಟಿ, ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ್ ದೊಡಮನಿ, ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಸತೀಶ್, ಅಂಗನವಾಡಿ ಮೇಲ್ವಿಚಾರಕಿ ಮಲ್ಲಮ್ಮ ಸೇರಿದಂತೆ ವಿವಿಧ ತಾಲ್ಲೂಕು ಮಟ್ಟದ ಅಧಿಕಾರಿಗಳು, ಕುರ್ಡಿ ಹಾಗೂ ಆರೋಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ವಿಬಿ-ಜಿ ರಾಮ್‌ಜಿ ಯೋಜನೆಯ ಸಿಬ್ಬಂದಿಗಳು ಇದ್ದರು.

ಸುಳ್ಳು ಪ್ರಚಾರಕ್ಕೆ ಮಾನನಷ್ಟ ಮೊಕದ್ದಮೆ ಬಾಗ್ಲಿ ಎಚ್ಚರಿಕೆ

ಪಾವತಿಸಲು ಸಿದ್ಧವಿರುವುದಾಗಿ ಲೆಕ್ಕಪರಿಶೋಧಕರಿಗೆ ಲಿಖಿತವಾಗಿ ತಿಳಿಸಿದ್ದಾಗಿ ಹೇಳಿದರು.


ಆದರೆ ಜು.27ರಂದು ಹಣ ಪಾವತಿಸುವಂತೆ ನೋಟಿಸ್ ನೀಡಲಾಗಿದ್ದು, ಸೆ.24ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿಯೂ ವಿಷಯ ಚರ್ಚಿಸಲಾಗಿದೆ. ಲೆಕ್ಕಪರಿಶೋಧನಾ ವರದಿಯಲ್ಲಿ ಉಲ್ಲೇಖಿಸಿರುವ ಮೊತ್ತಕ್ಕಿಂತ ಹೆಚ್ಚಿನ ಹಣ ದುರುಪಯೋಗ ಮಾಡಿಕೊಂಡಿರುವುದಾಗಿ ತಮ್ಮ ವಿರುದ್ಧ ಆರೋಪ ಹಾಗೂ ಅಪಪ್ರಚಾರ ಮಾಡಲಾಗುತ್ತಿದೆ. ಇದು ಸತ್ಯಕ್ಕೆ ದೂರವಾದದ್ದು ಎಂದು ಮಲ್ಲಪ್ಪ ಬಾಗ್ಲಿ ಹೇಳಿದರು.

"ಸುಮಾರು 23 ವರ್ಷ ಸಂಘದಲ್ಲಿ ಸೇವೆ ಸಲ್ಲಿಸಿದ್ದು, ಯಾವುದೇ ರೈತರಿಗೆ ಮೋಸ, ವಂಚನೆ ಅಥವಾ ಅನ್ಯಾಯ ಮಾಡಿಲ್ಲ. ನನ್ನ ಸೇವಾವಧಿಯಲ್ಲಿ ಸಂಘದ ಕಾರ್ಯಚಟುವಟಿಕೆಗಳನ್ನು ಮೆಚ್ಚಿ ವಿವಿಧ ಬ್ಯಾಂಕ್‌ಗಳಿಂದ ಸುಮಾರು ಆರು ಬಾರಿ ಅತ್ಯುತ್ತಮ ಸಹಕಾರ ಸಂಘವೆಂಬ ಪ್ರಶಸ್ತಿ ದೊರೆತಿದೆ," ಎಂದರು.

ಲೆಕ್ಕಪರಿಶೋಧನಾ ವರದಿಯಲ್ಲಿರುವ ಮೊತ್ತವನ್ನು ಸರಿದೂಗಿಸಿಕೊಂಡು ಪ್ರಕರಣವನ್ನು ಇತ್ಯರ್ಥಪಡಿಸಬೇಕು. ಇಲ್ಲದಿದ್ದರೆ ತಮ್ಮ ವಿರುದ್ಧ ಆಧಾರರಹಿತ ಆರೋಪ ಹಾಗೂ ಅಪಪ್ರಚಾರ ಮುಂದುವರಿಸುವವರ ವಿರುದ್ಧ ಕಾನೂನು ಹೋರಾಟ ನಡೆಸಿ ಮಾನನಷ್ಟ ಮೊಕದ್ದಮೆ ದಾಖಲಿಸುವುದಾಗಿ ಎಚ್ಚರಿಸಿದರು.

ಈ ಸಂದರ್ಭದಲ್ಲಿ ಶಿವರಾಜ ಬಡಿಗೇರ ಹಾಗೂ ಸುಭಾಷ ನೆಲಹಾಳ ಉಪಸ್ಥಿತರಿದ್ದರು.

ಬೀದರ:ಅಗ್ನಿವೀರ ಸೇನಾ ಭರ್ತಿ ರ‍್ಯಾಲಿ



ಬೀದರ, ಸೆ.29-

ಬೀದರನಲ್ಲಿ ಜನೇವರಿ-2027 ರಲ್ಲಿ ಹದಿನೈದು ದಿನಗಳ ಕಾಲ ಅಗ್ನಿವೀರ ಸೇನಾ ಭರ್ತಿ ರ‍್ಯಾಲಿ ಜರುಗಲಿದ್ದು, ಜಿಲ್ಲಾಡಳಿತ, ಪೊಲೀಸ್ ಇಲಾಖೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಸೇನಾ ಭರ್ತಿ ರ‍್ಯಾಲಿ ಸುವ್ಯವಸ್ಥಿತವಾಗಿ ಜರುಗಿಸಲು ಎಲ್ಲ ರೀತಿಯ ಸಹಾಯ ಸೌಕರ್ಯ ನೀಡುವುದಾಗಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ತಿಳಿಸಿದರು. ಅವರು ಶುಕ್ರವಾರ ಬೀದರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಈ ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಕಲ್ಯಾಣ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಸುಮಾರು 12,000 ಅಭ್ಯರ್ಥಿಗಳು ಸೇನಾ ಭರ್ತಿ ರ‍್ಯಾಲಿಯಲ್ಲಿ ಪಾಲ್ಗೊಳ್ಳಲಿದ್ದಾರೆ. ನೆಹರು ಕ್ರೀಡಾಂಗಣದಲ್ಲಿ ಸ್ವಚ್ಛತೆ ಕಾಪಾಡಲು, ಅಭ್ಯರ್ಥಿಗಳಿಗೆ ಅನುಕೂಲವಾಗಲು ಬಸ್ ಸಂಚಾರ, ಅಗತ್ಯ ವೈದ್ಯಕೀಯ ತಂಡ, ಅಂಬುಲೆನ್ಸ್ , ಕುಡಿಯುವ ನೀರು, ಬ್ಯಾರಿಕೇಡ್, ಭದ್ರತೆ, ಇಂಟರನೆಟ್, ವಿದ್ಯುತ್, ಶಾಮಿಯಾನ, ಟೆಂಟ್, ಅಗ್ನಿಶಾಮಕ ವಾಹನ, ಪೊಲೀಸ್ ಬಂದೋಬಸ್ತ ಮುಂತಾದ ವ್ಯವಸ್ಥೆಗಳನ್ನು ಜವಾಬ್ದಾರಿ ಯಿಂದ ಆಯೋಜಿಸುವಂತೆ ಸಂಬಂದಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಬೆಳಗಾವಿಯ ಡೈರೆಕ್ಟರ್ ಆರ್ಮಿ ರಿಕ್ರುಟಿಂಗ್ ಕಚೇರಿಯ ಕರ್ನಲ್ ಜಸವೀರಸಿಂಗ್ ಎಸ್.ಎಮ್ ಅವರು ಮಾತನಾಡಿ ಪ್ರತಿ ದಿನ 800 ರಿಂದ 1,000 ಅಭ್ಯರ್ಥಿಗಳು ದೈಹಿಕ ಹಾಗೂ ವೈದ್ಯಕೀಯ ಪರೀಕ್ಷೆಗೆ ಒಳಪಡುತ್ತಾರೆ. ಬೀದರ, ಕಲಬುರ್ಗಿ, ಯಾದಗಿರಿ, ರಾಯಚೂರ, ಕೊಪ್ಪಳ ಹಾಗೂ ಬೆಳಗಾವಿ ಜಿಲ್ಲೆಗಳ ಸುಮಾರು 12,100 ಅಭ್ಯರ್ಥಿಗಳು ಈ ರ‍್ಯಾಲಿಯಲ್ಲಿ ಪಾಲ್ಗೊಳ್ಳಲಿದ್ದಾರೆ. ಸೇನಾ ಭರ್ತಿ ರ‍್ಯಾಲಿಯು ಯಶಸ್ವಿಯಾಗುವ ನಿಟ್ಟನಲ್ಲಿ ಜಿಲ್ಲಾಡಳಿತ ಸಹಾಯ ಕೋರಿದರು. ಸಭೆಯಲ್ಲಿ ಡಿ.ಎಸ್.ಪಿ ದಾದಾಪೀರ ಮುಲ್ಲಾ, ಸೇನಾ ಭರ್ತಿ ಕಚೇರಿಯ ಹವಾಲ್ದಾರ ಧೀರಜ ಭಂಡಾರಿ, ಸುಭೇದಾರ ಮೇಜರ್ ಮನೋಜ ಕುಮಾರ ಶರ್ಮಾ, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಅಧ್ಯಕ್ಷ ರಾಜಕುಮಾರ ಲದ್ದೆ, ಲೋಕೋಪಯೋಗಿ ಇಲಾಖೆಯ ಇ.ಇ ಕಾಮಶೆಟ್ಟಿ, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.



ಔರಾದ್ ತಾಲೂಕಿನ ಜಂಬಗಿ ಗ್ರಾಮದಲ್ಲಿ ನಕಲಿ ವೈದ್ಯಕೀಯ ವೃತ್ತಿ ನಡೆಸುತ್ತಿದ್ದ ಕ್ಲಿನಿಕ್ ಸೀಜ್

ಬೀದರ, ಸೆ.29-

ಬೀದರ ಜಿಲ್ಲೆಯ ಔರಾದ್ ತಾಲೂಕಿನ ಜಂಬಗಿ ಗ್ರಾಮದಲ್ಲಿ ನಕಲಿ ವೈದ್ಯ ವೃತ್ತಿ ನಡೆಸುತ್ತಿದ್ದ ರಾಜಶೇಖರ ಎಂಬುವವರ ಕ್ಲಿನಿಕ್ ಅನ್ನು ಸೀಜ್ ಮಾಡಲಾಗಿದೆ ಎಂದು ಬೀದರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ತಿಳಿಸಿದ್ದಾರೆ. ಬೀದರ ಜಿಲ್ಲೆಯ ಔರಾದ್ ತಾಲೂಕಿನ ಜಂಬಗಿ ಗ್ರಾಮದ ರಾಜಶೇಖರ ಎಂಬುವವರು ಯಾವುದೇ ಅರ್ಹ ವೈದ್ಯಕೀಯ ಪದವಿ ಪಡೆಯದೆ ನಕಲಿ ವೈದ್ಯ ವೃತ್ತಿ ನಡೆಸುತ್ತಿರುವುದು ಗಮನಕ್ಕೆ ಬಂದ ಹಿನ್ನೆಲೆಯಲ್ಲಿ, 2026ರ ಸೆಪ್ಟೆಂಬರ್ 28ರಂದು ಮಧ್ಯಾಹ್ನ 2.40 ಗಂಟೆಗೆ ಅವರ ಕ್ಲಿನಿಕ್ ಮೇಲೆ ಅನಿರೀಕ್ಷಿತ ದಾಳಿ ನಡೆಸಿ ಕ್ಲಿನಿಕ್ ಅನ್ನು ಸೀಜ್ ಮಾಡಲಾಗಿದೆ. ದಾಳಿಯ ಸಂದರ್ಭದಲ್ಲಿ ಜಿಲ್ಲಾ ಕೆ.ಪಿ.ಎಂ.ಇ. ನೋಡಲ್ ಅಧಿಕಾರಿಗಳಾದ ಡಾ. ದಿಲೀಪ್ ಡೋಂಗ್ರೆ, ಔರಾದ್ ತಾಲೂಕು ಆರೋಗ್ಯ ಅಧಿಕಾರಿ ಡಾ.ಅನಿಲ್ ಕುಮಾರ್, ಕೆ.ಪಿ.ಎಂ.ಇ. ವಿಷಯ ನಿರ್ವಾಹಕರಾದ ಮಹೇಶ್ವರ್ ರೆಡ್ಡಿ ಹಾಗೂ ಗ್ರೂಪ್ 'ಡಿ' ಸಿಬ್ಬಂದಿ ಬಲಭೀಮ್ ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಬರ: ರಾಜಕೀಯ ಬೆರೆಸುವುದು ಬೇಡ

ಇಳೆಗೆ ಮಳೆ ಬೆನ್ನು ತೋರಿಸಿರುವುದರಿಂದ ರಾಜ್ಯದಲ್ಲಿ ಬರ ತೀವ್ರ ಸ್ವರೂಪ ಪಡೆದಿದೆ. ಪರಿಹಾರ ಮತ್ತು ಇತರ ನಿವಾರಣೋಪಾಯಗಳ ಬಗ್ಗೆ ಗಂಭೀರವಾಗಿ ಯೋಚಿಸಬೇಕಿದ್ದ ನಮ್ಮ ಜನಪ್ರತಿನಿಧಿಗಳು ರಾಜಕೀಯ ಕೆಸರೆರಚಾಟದಲ್ಲಿ ತೊಡಗಿದ್ದಾರೆ. ಆಡಳಿತ ಪಕ್ಷದ ಮೇಲೆ ವಿರೋಧ ಪಕ್ಷಗಳು ಮತ್ತು ವಿರೋಧ ಪಕ್ಷಗಳ ಮೇಲೆ ಆಡಳಿತ ಪಕ್ಷ ಗೂಬೆ ಕೂರಿಸುವ ಕೆಲಸದಲ್ಲಿ ತೊಡಗಿವೆ. ಪರಿಹಾರ ನೀಡುವ ವಿಚಾರದಲ್ಲಿ ರಾಜ್ಯ ಸರಕಾರದ ಹೊಣೆಗಾರಿಕೆ ಮತ್ತು ಕೇಂದ್ರ ಸರಕಾರ ಚಾಚಬೇಕಿರುವ ಸಹಾಯಹಸ್ತದ ಕುರಿತು ಪ್ರಕೃತಿ ವಿಕೋಪ ಎದುರಾದ ಪ್ರತೀ ಸಂದರ್ಭದಲ್ಲಿ ಯಥಾರೀತಿ ನಡೆಯುವಂತಹ ಒಣಚರ್ಚೆ ಈಗಲೂ ಮುನ್ನೆಲೆಗೆ ಬಂದಿದೆ. ಈ ಚರ್ಚೆಯಲ್ಲಿ ರೈತಪರ ಕಾಳಜಿಗಿಂತ ರಾಜಕೀಯ ಲಾಭ-ನಷ್ಟದ ಲೆಕ್ಕಾಚಾರಗಳೇ ಎದ್ದುಕಾಣುತ್ತಿವೆ. ನೊಂದ ಮನಸ್ಸಿಗೆ ಸಾಂತ್ವನ ಹೇಳುವ ರೀತಿಯಲ್ಲಿ ಆಳುವ ಪಕ್ಷವೂ ಪ್ರಾಮಾಣಿಕವಾಗಿ ಸ್ಪಂದಿಸಿಲ್ಲ. ವಿರೋಧ ಪಕ್ಷಗಳಿಂದಲೂ ಅಂತಹ ಸ್ಪಂದನ ವ್ಯಕ್ತವಾಗಿಲ್ಲ ಎಂಬುದು ದುರದೃಷ್ಟದ ಸಂಗತಿ.

ವಿಧಾನಮಂಡಲದ ವಿಶೇಷ ಅಧಿವೇಶನ ಕರೆದು ಅನಾವೃಷ್ಟಿ ಕುರಿತು ಸದಸ್ಯರು ಮೂರು ದಿನ ಚರ್ಚೆ ಮಾಡಿದರು. ಸಾಲ ಮರುಪಾವತಿ ಅವಧಿಗೆ ಸಂಬಂಧಿಸಿದಂತೆ ಒಂದೆರಡು ಉಪಕ್ರಮ ಘೋಷಣೆಯಾಗಿರುವುದು ಬಿಟ್ಟರೆ, ರೈತರಲ್ಲಿ ನಿರಾಳಭಾವ ಮೂಡಿಸುವಂತಹ ಇನ್ನಾವುದೇ ಮಹತ್ವದ ಭರವಸೆ ಹೊರಬೀಳಲಿಲ್ಲ. ರಾಜ್ಯದ ಬರಪೀಡಿತ ಪ್ರದೇಶದ ರೈತರು ಸಂಕಷ್ಟದಲ್ಲಿ ಇರುವುದರಿಂದ ಕೃಷಿ ಉತ್ಪಾದನಾ ವೆಚ್ಚ ಕಡಿಮೆ ಮಾಡಲು ತಕ್ಷಣ ಜಾರಿಗೆ ಬರುವಂತೆ ಪ್ರತೀ ರೈತನಿಗೆ 2,500 ರೂ. ಆರ್ಥಿಕ ನೆರವು ನೀಡಲಾಗುವುದು ಎಂದು ಕಂದಾಯ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಜಿ. ಪರಮೇಶ್ವರ್ ಅವರು ಘೋಷಿಸಿದ್ದಾರೆ. ತಕ್ಷಣದ ಪರಿಹಾರವಾಗಿ ಸರಕಾರ ಘೋಷಿಸಿದ ಈ ನೆರವಿನಿಂದ ಉತ್ಪಾದನಾ ವೆಚ್ಚ ಅದು ಹೇಗೆ ಕಡಿಮೆ ಆಗುತ್ತದೋ? ರೈತರ ಸಂಕಷ್ಟ ಹೇಗೆ ನಿವಾರಣೆ ಆಗುತ್ತದೋ? ಇಂತಹ ಮಹತ್ವದ ಸಲಹೆ ಕೊಟ್ಟ ಅಧಿಕಾರಿಗಳನ್ನು ಗುರುತಿಸಿ, ಸನ್ಮಾನಿಸಬೇಕಾದ ಹೊಣೆ ರೈತ ಮುಖಂಡರ ಮೇಲಿದೆ.

ಬರಗಾಲದಲ್ಲಿ ನಾವು ರೈತರನ್ನು ಬದುಕಿಸಬೇಕು. ಕೇಂದ್ರ ಸರಕಾರವು ಕೈಗಾರಿಕೋದ್ಯಮಿಗಳಿಗೆ ಲಕ್ಷಾಂತರ ಕೋಟಿ ರೂ. ಸಾಲ ಮನ್ನಾ ಮಾಡಿದಂತೆ ರೈತರ ಸಾಲ ಮನ್ನಾ ಮಾಡಲಿ. ರಾಜ್ಯದ ಪಾಲನ್ನು ಭರಿಸಲು ನಾವು ಸಿದ್ಧರಿದ್ದೇವೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸದನದಲ್ಲಿ ಹೇಳಿದ್ದಾರೆ. ಬೃಹತ್ ಉದ್ಯಮಿಗಳ ಪರವಾಗಿ ಸರಕಾರಗಳು ತಳೆಯುವಂತಹ ಉದಾರ ಧೋರಣೆಯನ್ನು ರೈತರ ಪರವಾಗಿಯೂ ತಳೆಯಬೇಕು ಎಂದು ಅವರು ಹೇಳಿರುವುದು ಒಪ್ಪಬಹುದಾದ ಮಾತು. ಆದರೆ ದೀಪದ ಬುಡದಲ್ಲಿ ಕತ್ತಲು ಎಂಬಂತೆ ಅವರ ನೇತೃತ್ವದ ಸರಕಾರ ಮೂರು ಕಾಸಿನ ನೆರವು ಘೋಷಿಸಿ, ಕೇಂದ್ರ ಸರಕಾರದ ಕಡೆ ಬೆರಳು ತೋರಿಸಿದರೆ ಅಂತಹ ಮಾತಿಗೆ ಕಿಮ್ಮತ್ತು ಇರುವುದಿಲ್ಲ ಎಂಬುದನ್ನು ಮುಖ್ಯಮಂತ್ರಿ ಅರಿಯಬೇಕು. 2,500 ರೂ.ಗೆ ಈಗ ಇರುವ ಮಾರುಕಟ್ಟೆ ಮೌಲ್ಯವು ಅವರಿಗೆ ಗೊತ್ತಿಲ್ಲದೇ ಇರುವಂತಹ ಸಂಗತಿ ಏನೂ ಅಲ್ಲ. ಎನ್‌ಡಿಆರ್‌ಎಫ್ ಅನುದಾನದ ನಿರೀಕ್ಷೆಯಲ್ಲಿ ಈ ನೆರವು ನೀಡಲು ತೀರ್ಮಾನಿಸಿದ್ದೇವೆ. ಇದರಿಂದ 45 ಲಕ್ಷದಿಂದ 50 ಲಕ್ಷ ರೈತರಿಗೆ ಅನುಕೂಲ ಆಗಲಿದೆ ಎಂದು ಕಂದಾಯ ಸಚಿವರು ಹೇಳಿರುವ ಮಾತು ವಸ್ತುಸ್ಥಿತಿಯ ಅರಿವಿನ ಕೊರತೆಯನ್ನಷ್ಟೇ ಬಿಂಬಿಸುತ್ತದೆ. ರೈತರಿಗೆ ಭಿಕ್ಷೆ ಬೇಡ. ಈ ರೀತಿ ಮೂರು ಕಾಸು ಕೊಟ್ಟು ರೈತರನ್ನು ಅವಮಾನಿಸಬೇಡಿ. ಈ ಎರಡೂವರೆ ಸಾವಿರ ರೂಪಾಯಿ ಪಡೆಯಲು ಕಚೇರಿಗೆ ಅಲೆದಾಡುವುದಕ್ಕೇ ಆ ದುಡ್ಡು ಖರ್ಚಾಗುತ್ತದೆ ಎಂದು ರೈತ ಸಂಘದ ತುಮಕೂರು ಜಿಲ್ಲಾ ಘಟಕದ ಅಧ್ಯಕ್ಷ ಗೋವಿಂದರಾಜು ವ್ಯಕ್ತಪಡಿಸಿರುವ ಆಕ್ರೋಶಕ್ಕೆ ಅರ್ಥ ಇದೆ ಮತ್ತು ಅವರ ಮಾತಿನಲ್ಲಿ ಹುರುಳಿದೆ ಎಂದು ಯಾರಿಗಾದರೂ ಮನವರಿಕೆಯಾಗುತ್ತದೆ. ಬರದ ಸಂಕಷ್ಟಕ್ಕೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಸ್ಪಂದಿಸುತ್ತಿಲ್ಲ ಎಂದು ಪ್ರತಿಭಟಿಸಿ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ತುಮಕೂರಿನಲ್ಲಿ ರೈತರು ಸೋಮವಾರ ನಡೆಸಿದ ಧರಣಿ ಸಂದರ್ಭದಲ್ಲಿ ಅವರು ಸಿಟ್ಟು ಹೊರಹಾಕಿದ್ದಾರೆ.

ರಾಜ್ಯದ ಬರ ಪರಿಸ್ಥಿತಿ ಕುರಿತು ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಲು ದಿಲ್ಲಿಗೆ ಸರ್ವಪಕ್ಷ ನಿಯೋಗ ಒಯ್ಯುವ ಮುಖ್ಯಮಂತ್ರಿಯವರ ಪ್ರಸ್ತಾವಕ್ಕೂ ರಾಜಕೀಯದ ರಾಡಿ ಮೆತ್ತಿಕೊಂಡಿದೆ. ಬರ ವಿಚಾರದಲ್ಲಿ ಸರ್ವಪಕ್ಷ ನಿಯೋಗದ ಜೊತೆ ಹೋಗುವುದಿಲ್ಲ ಎಂದು ಬಿಜೆಪಿ ನಾಯಕರು ಹೇಳಿದ್ದಾರೆ. ಬರ ಪರಿಸ್ಥಿತಿ ನಿರ್ವಹಣೆಗೆ ಸಂಬಂಧಿಸಿದಂತೆ ರಾಜ್ಯ ಸರಕಾರವು ಕೇಂದ್ರದತ್ತ ಬೆಟ್ಟು ಮಾಡುವುದನ್ನು ಬಿಟ್ಟು, ರಾಜ್ಯದ ಸಂಪನ್ಮೂಲದಿಂದಲೇ ರೈತರಿಗೆ ಪರಿಹಾರ ನೀಡಬೇಕು. ರಾಜ್ಯ ಸರಕಾರದ ಬೊಕ್ಕಸ ತುಂಬಿಸಿರುವವರು ನಮ್ಮ ಜನ. ಅವರು ಸಂಕಷ್ಟದಲ್ಲಿರುವಾಗ ಕೇಂದ್ರದತ್ತ ಕೈ ತೋರಿಸುತ್ತಿದ್ದೀರಿ ಏಕೆ? ಮನವಿಯ ನಾಟಕವೇಕೆ? ಎಂದು ಕೇಂದ್ರ ಸಚಿವ ಹಾಗೂ ಜೆಡಿಎಸ್ ಮುಖಂಡ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ. ಅಂದರೆ ನಿಯೋಗ ಒಯ್ಯುವ ವಿಚಾರದಲ್ಲಿಯೂ ರಾಜಕೀಯ ಪಕ್ಷಗಳ ನಡುವೆ ಸಹಮತ ಇಲ್ಲ ಎಂಬುದು ಖಾತರಿಯಾಯಿತು. ರೈತಪರ ಎಂದು ತೋರಿಸಿಕೊಳ್ಳಲು ರಾಜಕೀಯ ಪಕ್ಷಗಳ ನಡುವೆ ಪೈಪೋಟಿ ಇದೆ. ಆದರೆ ರೈತರಿಗೆ ಕಷ್ಟ ಎದುರಾದಾಗ ಸಂಕುಚಿತ ರಾಜಕಾರಣದ ಪರಿಧಿಯಿಂದ ಆಚೆ ನಿಂತು ಸ್ಪಂದಿಸುವಂತಹ ದೊಡ್ಡತನ ಯಾರಲ್ಲೂ ಇಲ್ಲ.

ಬರ ಪರಿಸ್ಥಿತಿ ಅಧ್ಯಯನಕ್ಕೆ ಕೇಂದ್ರ ಸರಕಾರದ ಅಂತರ್ ಸಚಿವಾಲಯಗಳ ಅಧಿಕಾರಿಗಳ ತಂಡ ಅಕ್ಟೋಬರ್ 3ರಂದು ರಾಜ್ಯಕ್ಕೆ ಆಗಮಿಸಲಿದೆ. ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತು ಕಂದಾಯ (ವಿಪತ್ತು ನಿರ್ವಹಣೆ) ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಅಂದು ಬೆಳಗ್ಗೆ ಪ್ರಾಥಮಿಕ ಸಭೆ ನಡೆಸಲಿದೆ. ಬಳಿಕ ಅಧಿಕಾರಿಗಳು ಮೂರು ತಂಡಗಳಾಗಿ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸಲಿದ್ದಾರೆ. ಅಧಿಕಾರಿಗಳು ದಿಲ್ಲಿಗೆ ವಾಪಸ್ ಹೋಗಿ ವರದಿ ಸಲ್ಲಿಸಿದ ಬಳಿಕ ಕೇಂದ್ರ ಸರಕಾರ ಅನುದಾನ ನಿಗದಿ ಮಾಡಲಿದೆ. ಸಂಕಷ್ಟದ ಸಂದರ್ಭದಲ್ಲಿ ನಿಯಮಗಳನ್ನು ಬದಿಗೆ ಸರಿಸಿ ನೆರವಿನಹಸ್ತ ಚಾಚಬೇಕಾದುದು ಕೇಂದ್ರದ ಕರ್ತವ್ಯ. ರಾಜ್ಯದಲ್ಲಿ ಬೇರೆ ಪಕ್ಷದ ಸರಕಾರ ಇದೆ ಎಂಬ ಕಾರಣಕ್ಕೆ ತಾರತಮ್ಯ ಮಾಡುವುದು, ವಿಳಂಬ ಧೋರಣೆ ಅನುಸರಿಸುವುದು ತರವಲ್ಲ.

ಆದರೆ, ಕೇಂದ್ರದ ನೆರವಿಗಾಗಿ ಕಾಯದೆ ರೈತರ ನೋವಿಗೆ ಮಿಡಿಯಬೇಕಾದುದು ರಾಜ್ಯ ಸರಕಾರದ ಗುರುತರ ಜವಾಬ್ದಾರಿ. ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಹೆಚ್ಚಿನ ನೆರವು ನೀಡುವಂತೆ ಅವರನ್ನು ಬೇಡಿಕೊಳ್ಳೋಣ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ನಿಯೋಗದಲ್ಲಿ ಭಾಗಿಯಾಗುವಂತೆ ವಿರೋಧ ಪಕ್ಷಗಳ ಮನವೊಲಿಸುವುದು ಮತ್ತು ಕೇಂದ್ರದ ಮೇಲೆ ಒತ್ತಡ ಹೇರಿ ಹೆಚ್ಚಿನ ಅನುದಾನ ಪಡೆಯುವುದು ಸರಕಾರ ಮುನ್ನಡೆಸುವವರ ರಾಜಕೀಯ ಜಾಣ್ಮೆ ಮತ್ತು ಸಾಮರ್ಥ್ಯವನ್ನು ಅವಲಂಬಿಸಿದೆ. ಅದು ಆಗಲಿ, ಹೋಗಲಿ ರೈತರ ಜೊತೆ ರಾಜ್ಯ ಸರಕಾರ ಇದೆ. ಅವರು ಎದೆಗುಂದುವ ಅಗತ್ಯ ಇಲ್ಲ ಎಂದು ನೊಂದ ಮಂದಿಗೆ ಮನವರಿಕೆಯಾಗುವ ರೀತಿಯಲ್ಲಿ ಸರಕಾರ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು. ಅದು ಸಾಧ್ಯವಾದಾಗ ಮಾತ್ರ ಮಾತಿನಲ್ಲಿ ವ್ಯಕ್ತವಾಗುವ ರೈತಪರ ಕಾಳಜಿಗೆ ಕೊಂಚಮಟ್ಟಿಗಾದರೂ ಕಿಮ್ಮತ್ತು ಉಳಿಯುತ್ತದೆ. ಅಭಿವೃದ್ಧಿಯ ಹೆಸರಿನಲ್ಲಿ ಮಾಡಬಾರದ್ದೆನ್ನಲ್ಲ ಮಾಡುವ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಜೀವಪರ, ಜನಪರ ಕಾಳಜಿಗಳಿಗಿಂತ ಲಾಭಕೋರತನವೇ ಪ್ರಧಾನವಾಗಿದೆ. ಈ ಹೃದಯಹೀನ ವ್ಯವಸ್ಥೆಯಲ್ಲಿ ಮನುಷ್ಯನ ಜೀವಕ್ಕೆ ಬೆಲೆಯೇ ಇಲ್ಲದಂತಾಗಿದೆ. ತಿನ್ನುವ ಆಹಾರ ಹೇಗೋ ಸುರಕ್ಷಿತವಾಗಿಲ್ಲ. ಈಗ ಮಾರಣಾಂತಿಕ ಕಾಯಿಲೆಗಳಿಂದ ಪಾರಾಗಲು ಖರೀದಿಸುವ ಔಷಧಿಗಳೂ ಪ್ರಾಣಘಾತಕವಾಗಿವೆ. ಇಂಥ ಅಪಾಯಕಾರಿ ಔಷಧಿಗಳು ಮಾರುಕಟ್ಟೆಯನ್ನು ಪ್ರವೇಶಿಸಿರುವುದರಿಂದ ಜನತೆ ಜೀವ ಕೈಯಲ್ಲಿ ಹಿಡಿದುಕೊಂಡು ಬದುಕಬೇಕಾದ ದಿನಗಳು ಬಂದಿವೆ. ಅವಧಿ ಮೀರಿದ ಹಾಗೂ ತಪ್ಪು ಲೇಬಲ್‌ಗಳನ್ನು ಹೊಂದಿರುವ ನಕಲಿ ಔಷಧಿಗಳ ಬಹುದೊಡ್ಡ ಜಾಲವನ್ನು ಇತ್ತೀಚೆಗೆ ಬೆಂಗಳೂರಿನಲ್ಲಿ ಪತ್ತೆ ಹಚ್ಚಲಾಗಿದೆ

ಪ್ರಾಣಘಾತಕ ಈ ನಕಲಿ ಔಷಧಿಗಳು ಈಗಾಗಲೇ ರಾಜ್ಯದ ಔಷಧಿ ಅಂಗಡಿಗಳನ್ನು ಮತ್ತು ನೂರಕ್ಕೂ ಹೆಚ್ಚು ಆಸ್ಪತ್ರೆಗಳನ್ನು ಕಾನೂನು ಬದ್ಧ ಮಾರ್ಗದ ಮೂಲಕ ಸೇರಿವೆ ಎಂಬುದು ಆತಂಕದ ಸಂಗತಿಯಾಗಿದೆ. ಈ ನಕಲಿ ಔಷಧಿಗಳನ್ನು ತೆಲಂಗಾಣ, ಹಿಮಾಚಲ ಪ್ರದೇಶ, ಹರ್ಯಾಣ ಮತ್ತು ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯಗಳಿಂದ ಸಂಗ್ರಹಿಸಿ ಇಲ್ಲವೇ ಆ ರಾಜ್ಯಗಳಲ್ಲಿ ತಯಾರು ಮಾಡಿ ನಂತರ ರಹಸ್ಯತಾಣವೊಂದರಲ್ಲಿ ಸಂಸ್ಕರಿಸಿ ಬೆಂಗಳೂರು ಮತ್ತಿತರ ಕಡೆ ವಿತರಿಸಲಾಗುತ್ತಿತ್ತು ಎಂಬ ಸಂಗತಿ ಬಯಲಿಗೆ ಬಂದಿದೆ. ಅಗ್ಗದ ಹಾಗೂ ಅವಧಿ ಮೀರಿದ ಔಷಧಿಗಳನ್ನು ಮರು ಪ್ಯಾಕೇಜ್ ಮಾಡಿ, ನಕಲಿ ಲೇಬಲ್‌ಗಳನ್ನು ಅಂಟಿಸಿ ಶೇ. 50 ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿತ್ತು ಎಂಬ ಸಂಗತಿ ಔಷಧಿ ನಿಯಂತ್ರಣ ವ್ಯವಸ್ಥೆಯ ವೈಫಲ್ಯಕ್ಕೆ ಸಾಕ್ಷಿಯಾಗಿದೆ.

ಈ ನಕಲಿ ಔಷಧಿಗಳಲ್ಲಿ ಮಾತ್ರೆಗಳನ್ನು ಸೀಮೆ ಸುಣ್ಣ, ಸ್ಟಾರ್ಚ್ ಹಾಗೂ ಕಳಪೆ ಪುಡಿಗಳನ್ನು ಸೇರಿಸಿ ತಯಾರಿಸಲಾಗುತ್ತಿತ್ತು. ಮಧು ಮೇಹ, ರಕ್ತದೊತ್ತಡ, ಹೃದಯ ಸಂಬಂಧಿಸಿದ ಕಾಯಿಲೆಗಳಿಗೆ ಹಾಗೂ ಕ್ಯಾನ್ಸರ್‌ಗೆ ಈ ನಕಲಿ ಔಷಧಿಗಳನ್ನು ನೀಡಲಾಗುತ್ತಿತ್ತು. ಇಂಥ ನಕಲಿ ಔಷಧಿಗಳಿಂದ ದಿಢೀರ್ ಹೃದಯಾಘಾತ ಅಥವಾ ಪಾರ್ಶ್ವವಾಯು ಕಾಯಿಲೆಗಳು ಉಲ್ಬಣಿಸುತ್ತಿದ್ದವು. ಕಳಪೆ ಗುಣಮಟ್ಟದ ಆ್ಯಂಟಿಬಯೋಟಿಕ್‌ಗಳು ರೋಗಕಾರಕ ಬ್ಯಾಕ್ಟೀರಿಯಗಳನ್ನು ಪೂರ್ಣವಾಗಿ ನಾಶ ಮಾಡಲು ಆಗುವುದಿಲ್ಲ ಎಂಬುದು ಕಳವಳಕಾರಿ ಸಂಗತಿಯಾಗಿದೆ. ಈ ನಕಲಿ ಔಷಧಿಗಳನ್ನು ತೆಗೆದುಕೊಂಡರೂ ಕಾಯಿಲೆ ಗುಣವಾಗದಿದ್ದಾಗ ವೈದ್ಯರ ರೋಗ ನಿರ್ಣಯ ಅಥವಾ ಚಿಕಿತ್ಸೆ ಯನ್ನೇ ರೋಗಿಗಳು ಮತ್ತು ಅವರ ಸಂಬಂಧಿಕರು ಸಹಜವಾಗಿ ಸಂಶಯಿಸುತ್ತಾರೆ. ಇದರಿಂದ ಗಂಭೀರ ಕಾಯಿಲೆಗಳು ಮತ್ತಷ್ಟು ಉಲ್ಬಣಿಸುತ್ತವೆ.

ಜೀವ ರಕ್ಷಕ ಔಷಧಿಗಳನ್ನು ನಂಬಿ ಕ್ಯಾನ್ಸರ್‌ನಂಥ ಮಾರಕ ಕಾಯಿಲೆಯ ವಿರುದ್ಧ ಸೆಣಸುತ್ತಿರುವ ವ್ಯಕ್ತಿಗೆ ತನ್ನ ಜೀವ ಉಳಿಸಬೇಕಾದ ಔಷಧಿಗಳೇ ಕಳಪೆ ಎಂಬುದು ಗೊತ್ತಾದರೆ ಕುಸಿದು ಹೋಗುತ್ತಾನೆ. ಕಳಪೆ ಔಷಧಿ, ಕಲುಷಿತ ಚುಚ್ಚು ಮದ್ದಿನ ಪರಿಣಾಮವಾಗಿ ಸೋಂಕು ಹಾಗೂ ಹಲವಾರು ಸಮಸ್ಯೆಗಳು ಉಂಟಾಗಬಹುದು. ಇಂಥ ಸಂದರ್ಭಗಳಲ್ಲಿ ಅಂದರೆ ನಕಲಿ ಔಷಧಿಗಳನ್ನು ತೆಗೆದುಕೊಂಡ ರೋಗಿ ಸ್ಪಂದಿಸದಿದ್ದಾಗ, ಔಷಧಿಯ ವಿರುದ್ಧ ಪ್ರತಿರೋಧ ಗುಣವನ್ನು ರೋಗ ಬೆಳೆಸಿಕೊಂಡಿರಬಹುದು. ವೈದ್ಯರು ತಪ್ಪಾಗಿ ನಿರ್ಣಯಿಸಿ ಹೆಚ್ಚಿನ ಡೋಸ್ ಔಷಧಿಗಳನ್ನು ನೀಡಬಹುದು. ಹೀಗಾಗದಂತೆ ಎಚ್ಚರ ವಹಿಸಬೇಕಾಗಿದೆ. ಹಾಗಾಗಿ ಅಸುರಕ್ಷಿತ ಹಾಗೂ ಅಪಾಯಕಾರಿ ಔಷಧಿಗಳನ್ನು ಉಪಯೋಗಿಸುವ ಆಸ್ಪತ್ರೆಗಳನ್ನು ತುರ್ತಾಗಿ ಗುರುತಿಸಿ ಕ್ರಮ ಕೈಗೊಳ್ಳಬೇಕಾಗಿದೆ.

ಜೀವ ಕೊಲ್ಲುವ ಈ ನಕಲಿ ಔಷಧಿಗಳ ಜಾಲವನ್ನು ಪತ್ತೆ ಹಚ್ಚಿ ಕಾರ್ಯಾಚರಣೆಗೆ ಇಳಿದ ವಿಶೇಷ ತನಿಖಾ ತಂಡ(ಎಸ್‌ಐಟಿ) ಹಲವಾರು ಅಪಾಯಕಾರಿ ಅಂಶಗಳನ್ನು ಬಯಲಿಗೆಳೆದಿದೆ. ಕೆಲವು ಪ್ರಮುಖ ಆರೋಪಿಗಳನ್ನು ವಶಕ್ಕೆ ಪಡೆದಿದೆ. ಇದು ಇಷ್ಟಕ್ಕೆ ನಿಲ್ಲಬಾರದು. ನಕಲಿ ಔಷಧಿಗಳ ಉತ್ಪಾದಕರಿಂದ ಹಿಡಿದು ಔಷಧಿ ಅಂಗಡಿಗಳು ಹಾಗೂ ಚಿಕಿತ್ಸಾಲಯಗಳವರೆಗೆ ಹರಡಿದ ಕಾನೂನು ಬಾಹಿರ ಜಾಲವನ್ನು ಸದೆ ಬಡಿಯಲು ಕಠಿಣ ಕ್ರಮಗಳು ಅನಿವಾರ್ಯವಾಗಿವೆ. ನಕಲಿ ಔಷಧಿ ತಯಾರಿಕೆ ಹಾಗೂ ವಿತರಣೆಯನ್ನು ಕೊಲೆ ಯತ್ನದ ಆರೋಪ ಎಂದು ಪರಿಗಣಿಸಬೇಕು. ಪಾತಕಿಗಳಿಗೆ ಜಾಮೀನು ಸಿಗದಂಥ ಕಲಂಗಳನ್ನು ಹಾಕಬೇಕು. ಜೀವಾವಧಿ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. ಇದರಲ್ಲಿ ಶಾಮೀಲಾದವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು.

ಮೋದಿ ಸರ್ಕಾರ ಗೆದ್ದದ್ದೋ ಅಥವಾ ಕದ್ದದ್ದೋ? ಸಿಇಸಿ ವಿವಾದ ಪುನಃ ಭುಗಿಲೆಬ್ಬಿಸಿದ ವಿವಾದ

2024ರ ಲೋಕಸಭಾ ಚುನಾವಣೆಯ ಮತದಾನ ಅಂಕಿಅಂಶಗಳಲ್ಲಿ ಕಂಡುಬಂದ 4.65 ಕೋಟಿ ಮತಗಳ ವ್ಯತ್ಯಾಸ ಮತ್ತು 79 ಕ್ಷೇತ್ರಗಳ ಫಲಿತಾಂಶಗಳ ಕುರಿತು ವರದಿ ಗಂಭೀರ ಪ್ರಶ್ನೆಗಳನ್ನು ಎತ್ತಿತ್ತು. ಇದೇ ವೇಳೆ ಚುನಾವಣಾ ಆಯೋಗದ ಒಳಗಿನ ಭಿನ್ನಮತಗಳು ಬಹಿರಂಗವಾಗಿರುವುದು, ಭಾರತದ ಚುನಾವಣಾ ಪ್ರಕ್ರಿಯೆಯ ಪಾರದರ್ಶಕತೆ ಮತ್ತು ಸ್ವಾಯತ್ತತೆಯ ಮೇಲಿನ ಅನುಮಾನವನ್ನು ಇನ್ನಷ್ಟು ಗಾಢಗೊಳಿಸಿದೆ.

ಒಳಗಿನಿಂದಲೇ ಹೊರಬಿದ್ದಿರುವ ದಾಖಲೆಗಳು-ದಸ್ತಾವೇಜುಗಳು ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತು ಹಿಂದೆಂದೂ ಕಾಣದಷ್ಟು ಗಂಭೀರ ಪ್ರಶ್ನೆಗಳನ್ನು ಎತ್ತಿವೆ. ಮಾತ್ರವಲ್ಲ, ಸ್ವಾಯತ್ತ ಸಂಸ್ಥೆಯಾಗಿದ್ದ ಆಯೋಗ, ಮೋದಿ-ಶಾ ಸೂತ್ರದ ಬೊಂಬೆಯಾಗಿ, ಪಾತಾಳಕ್ಕೆ ಕುಸಿದಿದೆ ಎಂಬ ಆರೋಪ- ಆತಂಕಕ್ಕೂ ಗುರಿಯಾಗಿದೆ. ಹಾಲಿ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಆಯೋಗದ ಅರ್ಥಾತ್ ಗ್ಯಾನೇಶ್ ಕುಮಾರ್ ನೀತಿ/ನಿರ್ಧಾರ/ಧೋರಣೆಗಳು ಮೋದಿ-ಶಾ ಅಣತಿಯಂತೆಯೇ ನಡೆಯುತ್ತಿವೆ ಎಂಬ ಕಟುವಾಸ್ತವವನ್ನು ಇತ್ತೀಚಿನ ತನಿಖಾ ವರದಿಗಳು ಸ್ಪಷ್ಟಪಡಿಸಿವೆ. ಇದೇ ಹೊತ್ತಿನಲ್ಲಿ, ವೋಟ್ ಫಾರ್ ಡೆಮಾಕ್ರಸಿ () ಸಂಸ್ಥೆಯು ಎರಡೂವರೆ ವರ್ಷಗಳ ಹಿಂದೆ ಸಿದ್ಧಪಡಿಸಿದ್ದ 2024ರ ಲೋಕಸಭಾ ಚುನಾವಣೆ ನಿರ್ವಹಣೆ: ಮತ ತಿರುಚುವಿಕೆ ಮತ್ತು ಎಣಿಕೆ ಅಕ್ರಮಗಳ ವಿಶ್ಲೇಷಣೆ ಪುನಃ ಚರ್ಚೆ-ವಿವಾದಗಳ ಮುನ್ನೆಲೆಗೆ ಬಂದಿದೆ. ದೆಹಲಿ ಗದ್ದುಗೆಯನ್ನು ಅಲ್ಲಾಡಿಸುವಷ್ಟು ಮಟ್ಟಿಗೆ ಸಂದೇಹಗಳನ್ನು ಬಲಗೊಳಿಸಿದೆ. ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಕೂಟ ಸಾಧಿಸಿದ ಗೆಲುವು ನೈಜವಾಗಿ ಜನರಿಂದ ಗೆದ್ದದ್ದೋ ಅಥವಾ ಆಡಳಿತ ಯಂತ್ರವನ್ನು ದುರ್ಬಳಕೆ ಮಾಡಿಕೊಂಡು ಕದ್ದ ಗೆಲುವೋ ಎಂಬ ಗುಮಾನಿಯನ್ನು ಹುಟ್ಟುಹಾಕಿದೆ.

ಅಂದಹಾಗೆ, ಚುನಾವಣಾ ಆಯೋಗವು ಮೋದಿ-ಶಾ ಜೋಡಿಯ ಪದತಲದಲ್ಲಿ ಮಂಡಿಯೂರಿ ಕುಳಿತಿದೆ ಎಂಬುದರಲ್ಲಿ ಯಾವುದೇ ಅನುಮಾನಗಳಿಲ್ಲ. ಅಂತಹ ಪರಿಸ್ಥಿತಿ ಸೃಷ್ಟಿಯಾದದ್ದು ನಿನ್ನೆ-ಮೊನ್ನೆಯಲ್ಲ. ಚುನಾವಣಾ ಆಯುಕ್ತರ ನೇಮಕಾತಿಯ ನಿಯಮಗಳನ್ನು ಕೇಂದ್ರ ಸರ್ಕಾರ ತನಗೆ ಬೇಕಾದಂತೆ ತಿದ್ದುಪಡಿ ಮಾಡಿದಾಗಲೇ, ಆಯೋಗವು ಆಳುವವರ ಸುಪರ್ದಿಗೆ ಸರಿದಿತ್ತು. ಈಗ, ಇಬ್ಬರು ಸಹ-ಆಯುಕ್ತರನ್ನು ಬದಿಗೆ ತಳ್ಳಿ, ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ಅವರು ತಾವೇ ಏಕಚಕ್ರಾಧಿಪತಿಯಂತೆ ವರ್ತಿಸುತ್ತಿದ್ದಾರೆ ಎಂಬುದು ದಾಖಲೆಗಳೊಂದಿಗೆ ಬಹಿರಂಗವಾಗಿದೆ. ಆಯೋಗದ ಇಬ್ಬರು ಆಯುಕ್ತರಾದ ಸುಖ್‌ಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರು ಮತದಾರರ ಪಟ್ಟಿ ನಿರ್ವಹಣೆ, ಡೇಟಾಗಳ ದೆಹಲಿ ಕೇಂದ್ರೀಕರಣ ಹಾಗೂ ಫಾರ್ಮ್-6ನಲ್ಲಿ ಕಾನೂನುಬಾಹಿರ ತಿದ್ದುಪಡಿಗಳ ವಿರುದ್ಧ ಕಳೆದ 10 ತಿಂಗಳಲ್ಲಿ ಬರೋಬ್ಬರಿ 14ಕ್ಕೂ ಹೆಚ್ಚು ಬಾರಿ ಅಧಿಕೃತವಾಗಿ ಲಿಖಿತ ಆಕ್ಷೇಪ ಎತ್ತಿದ್ದಾರೆ. ಇದು, ಮೋದಿ-ಶಾ ಜೋಡಿಯ ರಾಜಕೀಯ ಇಂಗಿತವನ್ನು ಈಡೇರಿಸಲು, ಆಂತರಿಕ ಆಕ್ಷೇಪ/ವಿರೋಧವನ್ನೂ ತುಳಿದು ಗ್ಯಾನೇಶ್ ಕುಮಾರ್ ಏಕಪಕ್ಷೀಯವಾಗಿ ನಿರ್ಧಾರಗಳನ್ನು ದೇಶದ ಮೇಲೆ ಹೇರಿದ್ದಾರೆ ಎಂಬುದಕ್ಕೆ ಸ್ಪಷ್ಟ ಸಾಕ್ಷಿಯೂ ಆಗಿದೆ.

ಈ ಸಂದರ್ಭದಲ್ಲಿ, ವಿಎಫ್‌ಡಿ ಸಂಸ್ಥೆಯು 2024ರ ಚುನಾವಣೆಗೆ ಸಂಬಂಧಿಸಿದಂತೆ ಚುನಾವಣಾ ಆಯೋಗವೇ ನೀಡಿದ್ದ ಅಧಿಕೃತ ಅಂಕಿಅಂಶಗಳನ್ನು ವಿಶ್ಲೇಷಿಸಿ ಹೊರತಂದಿದ್ದ ಬೆಚ್ಚಿಬೀಳಿಸುವ ಅಂಶಗಳನ್ನು ನಾವು ಮತ್ತೆ ನೋಡಬೇಕಾದ ಅಗತ್ಯವಿದೆ. 2024ರ ಲೋಕಸಭಾ ಚುನಾವಣೆಯು ದೇಶಾದ್ಯಂತ 7 ಹಂತಗಳಲ್ಲಿ ನಡೆದಿತ್ತು. ಆ ಪ್ರತಿಯೊಂದು ಹಂತದ ಮತದಾನ ಮುಕ್ತಾಯಗೊಂಡಾಗ ಸಂಜೆ 7 ಗಂಟೆಯಿಂದ 8:45ರ ಅವಧಿಯಲ್ಲಿ ಆಯೋಗವು ನೀಡಿದ ಆರಂಭಿಕ ಅಂದಾಜು ಮತದಾನಕ್ಕೂ, ದಿನಗಳ ನಂತರ ಅದು ಪ್ರಕಟಿಸಿದ ಅಂತಿಮ ಮತದಾನದ ಲೆಕ್ಕಕ್ಕೂ ನಡುವೆ ಬರೋಬ್ಬರಿ 4.65 ಕೋಟಿ ಮತಗಳು ವ್ಯತ್ಯಾಸವಾಗಿದ್ದವು. ಅಂದರೆ, ಈ ಪ್ರಮಾಣದ ಮತಗಳು ಹಠಾತ್ತನೆ ನಿಗೂಢವಾಗಿ ಸೇರ್ಪಡೆಯಾಗಿದ್ದವು! ಇಡೀ ಚುನಾವಣೆಯಲ್ಲಿ ಸರಾಸರಿ 3.2%ನಿಂದ 6.32%ರಷ್ಟು ಅಸಹಜ ಮತಗಳ ಜಿಗಿತ ಕಂಡುಬಂದರೆ, ಆಂಧ್ರಪ್ರದೇಶದಲ್ಲಿ 12.45 ಮತ್ತು ಒಡಿಶಾದಲ್ಲಿ 12.48%ರಷ್ಟು ಮತಗಳು ಮತದಾನ ಮುಗಿದ ನಂತರ ಹಠಾತ್ತನೆ ಬಂದು ಬಿದ್ದಿದ್ದವು. ಐತಿಹಾಸಿಕವಾಗಿ ಭಾರತದ ಚುನಾವಣೆಗಳಲ್ಲಿ ಆರಂಭಿಕ ಮತ್ತು ಅಂತಿಮ ಲೆಕ್ಕದ ನಡುವೆ ಕೇವಲ 1%ರಷ್ಟು ವ್ಯತ್ಯಾಸವಿರುತ್ತಿತ್ತು. ಆದರೆ, ಈ ಬಾರಿ ಮಾತ್ರ, ಕೋಟ್ಯಂತರ ಮತಗಳು ಹೀಗೆ ಯಾವುದೇ ವೈಜ್ಞಾನಿಕ ಪುರಾವೆಗಳಿಲ್ಲದೆ ಸೇರ್ಪಡೆಯಾಗಿದ್ದವು. ಆದರೂ, ಈ ಬಗ್ಗೆ ಆಯೋಗವು ಈವರೆಗೂ ತುಟಿ-ಪಿಟಿಕ್ ಎಂದಿಲ್ಲ.

ಈ ಮತಗಳ ನಿಗೂಢ ಜಿಗಿತವು ಪ್ರತಿಯೊಂದು ಹಂತದಲ್ಲೂ ನಿರಂತರವಾಗಿ ನಡೆದಿತ್ತು. ಮೊದಲ ಹಂತದ 102 ಕ್ಷೇತ್ರಗಳಲ್ಲಿ ಆರಂಭಿಕ 62.87%ರಷ್ಟಿದ್ದ ಮತದಾನವು ಅಂತಿಮವಾಗಿ 66.14%ಕ್ಕೆ ತಲುಪಿ 54,45,009 ಮತಗಳು ಹೆಚ್ಚಾದವು. ಎರಡನೇ ಹಂತದ 88 ಕ್ಷೇತ್ರಗಳಲ್ಲಿ 60.96%ರಿಂದ 66.71%ಕ್ಕೆ ಏರಿಕೆಯಾಗಿ 91,20,285 ಮತಗಳು ಸೇರ್ಪಡೆಯಾದವು. ಮೂರನೇ ಹಂತದ 93 ಕ್ಷೇತ್ರಗಳಲ್ಲಿ 61.45%ರಿಂದ 65.68%ಕ್ಕೆ ಜಿಗಿದು 72,91,861 ಮತಗಳು ಅಧಿಕವಾದವು. ನಾಲ್ಕನೇ ಹಂತದ 96 ಕ್ಷೇತ್ರಗಳಲ್ಲಂತೂ ಅತಿ ಹೆಚ್ಚು ಅಂದರೆ 62.84%ರಿಂದ 69.16%ಕ್ಕೆ ಏರಿಕೆಯಾಗಿ ಭಾರಿ ಪ್ರಮಾಣದ 1,11,94,994 ಮತಗಳು ಪ್ರತ್ಯಕ್ಷವಾದವು. ಐದನೇ ಹಂತದ 49 ಕ್ಷೇತ್ರಗಳಲ್ಲಿ 57.47%ರಿಂದ 62.20%ಕ್ಕೆ ಜಿಗಿದು 42,35,904 ಮತಗಳು ಸೇರ್ಪಡೆಗೊಂಡರೆ, ಆರನೇ ಹಂತದ 58 ಕ್ಷೇತ್ರಗಳಲ್ಲಿ 59.06% ರಿಂದ 63.37%ಕ್ಕೆ ಏರಿಕೆಯಾಗಿ 48,01,345 ಮತಗಳು ಹೆಚ್ಚಾದವು. ಇನ್ನು ಕಡೆಯ, ಏಳನೇ ಹಂತದ 57 ಕ್ಷೇತ್ರಗಳಲ್ಲಿ 59.45%ರಿಂದ 63.88%ಕ್ಕೆ ಏರಿಕೆಯಾಗಿ 44,57,487 ಮತಗಳು ನಿಗೂಢವಾಗಿ ಸೇರಿಕೊಂಡವು.



ಈ ಅಸಹಜವಾಗಿ ಪ್ರತ್ಯಕ್ಷವಾದ ಹೆಚ್ಚುವರಿ ಮತಗಳ ಪರಿಣಾಮವು ಅಂತಿಮವಾಗಿ ಪ್ರಜಾಪ್ರಭುತ್ವದ ಆಶಯವನ್ನೇ ಬುಡಮೇಲು ಮಾಡಿದೆ. ದೇಶಾದ್ಯಂತ ಒಟ್ಟು 15 ರಾಜ್ಯಗಳ 79 ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಅಥವಾ ಎನ್‌ಡಿಎ ಅಭ್ಯರ್ಥಿಗಳು ಗೆದ್ದಿರುವ ಗೆಲುವಿನ ಅಂತರಕ್ಕಿಂತ, ಆಯಾ ಕ್ಷೇತ್ರಗಳಲ್ಲಿ ಅಸಹಜವಾಗಿ ಹೆಚ್ಚಳವಾದ ಅಂತಿಮ ಮತಗಳ ಸಂಖ್ಯೆಯೇ ಹೆಚ್ಚಾಗಿತ್ತು! ಅಂದರೆ, ಈ ಹೆಚ್ಚುವರಿ ಮತಗಳ ಸೇರ್ಪಡೆಯಾಗದಿದ್ದರೆ ಆ 79 ಕ್ಷೇತ್ರಗಳಲ್ಲಿ ಎನ್‌ಡಿಎ ಸೋಲನುಭವಿಸುತ್ತಿತ್ತು ಎಂಬುದು ಸ್ಪಷ್ಟ.

ರಾಜ್ಯವಾರು ಲೆಕ್ಕಾಚಾರವನ್ನು ನೋಡಿದರೆ, ಒಡಿಶಾದಲ್ಲಿ 12.48%ರಷ್ಟು ಜಿಗಿತವಾಗಿ 42.01 ಲಕ್ಷ ಮತಗಳು ಹೆಚ್ಚಾದವು; ಇದರ ಲಾಭ ಪಡೆದು ಜಾಜ್‌ಪುರ (1,587 ಮತಗಳ ಅಂತರ), ಕಂಧಮಾಲ್, ಭುವನೇಶ್ವರ, ಜಗತ್‌ಸಿಂಗ್‌ಪುರ, ಕಟಕ್, ಕೇಂದ್ರಾಪಾರ ಸೇರಿದಂತೆ 18 ಕ್ಷೇತ್ರಗಳನ್ನು ಬಿಜೆಪಿ ತನ್ನದಾಗಿಸಿಕೊಂಡಿತು. ಮಹಾರಾಷ್ಟ್ರದಲ್ಲಿ 82.63 ಲಕ್ಷ ಮತಗಳ ಜಿಗಿತವಾಗಿ ಅಕೋಲಾ, ಸತಾರಾ, ರತ್ನಗಿರಿ-ಸಿಂಧುದುರ್ಗ, ಬುಲ್ಡಾನ, ಮಲ್ವಣ್, ಹತ್ಕಣಂಗಲೆ ಮತ್ತು ಮುಂಬೈ ನಾರ್ತ್ ವೆಸ್ಟ್ (ಕೇವಲ 48 ಮತಗಳ ಅಂತರ) ಸೇರಿದಂತೆ 11 ಕ್ಷೇತ್ರಗಳಲ್ಲಿ ಮಹಾಯುತಿ/ಬಿಜೆಪಿ ಗೆದ್ದಿತು. ಪಶ್ಚಿಮ ಬಂಗಾಳದಲ್ಲಿ 36.71 ಲಕ್ಷ ಮತ ಹೆಚ್ಚಳವಾಗಿ ಬಿಷ್ಣುಪುರ (ಕೇವಲ 5,567 ಮತಗಳ ಅಂತರ), ಬಾಲುರ್‌ಘಾಟ್, ಪುರುಲಿಯಾ, ಕಂತಿ, ರಾಯ್‌ಗಂಜ್ ಮತ್ತು ಬಂಗಾವ್ ಸೇರಿದಂತೆ 10 ಕ್ಷೇತ್ರಗಳಲ್ಲಿ ಬಿಜೆಪಿ ಜಯ ಸಾಧಿಸಿತು. ಆಂಧ್ರಪ್ರದೇಶದಲ್ಲಿ 49 ಲಕ್ಷ ಮತಗಳು ಹೆಚ್ಚಾಗಿ ಒಂಗೋಲ್, ಕರ್ನೂಲ್, ನಂದ್ಯಾಲ್, ಹಿಂದೂಪುರ ಸೇರಿದಂತೆ 7 ಕ್ಷೇತ್ರಗಳಲ್ಲಿ ಎನ್‌ಡಿಎ (ಟಿಡಿಪಿ) ಅಭ್ಯರ್ಥಿಗಳು ಗೆದ್ದರು.

ಅಷ್ಟೇ ಏಕೆ? ನಮ್ಮ ಕರ್ನಾಟಕದಲ್ಲೂ 4.08%ರಷ್ಟು ಮತ ಜಿಗಿತವಾಗಿ 22.33 ಲಕ್ಷ ಮತಗಳು ಹೆಚ್ಚಾದವು; ಈ ಹೆಚ್ಚುವರಿ ಮತಗಳ ಸಂಖ್ಯೆಯು ಆರು ಕ್ಷೇತ್ರಗಳಲ್ಲಿ ಜೆಪಿ/ಎನ್‌ಡಿಎ ಗೆಲುವಿನ ಅಂತರಕ್ಕಿಂತ ಹೆಚ್ಚಾಗಿತ್ತು. ಇದರ ಫಲವಾಗಿ ಬೆಂಗಳೂರು ಸೆಂಟ್ರಲ್ (32,707 ಮತಗಳ ಅಂತರ), ಹಾವೇರಿ, ಚಿತ್ರದುರ್ಗ, ಬಾಗಲಕೋಟೆ, ಕೋಲಾರ ಮತ್ತು ಬಿಜಾಪುರ ಲೋಕಸಭಾ ಕ್ಷೇತ್ರಗಳನ್ನು ಬಿಜೆಪಿ ಗೆದ್ದುಕೊಂಡಿತು.

ಇವುಗಳ ಜೊತೆಗೆ ಛತ್ತೀಸ್‌ಗಢದ ಕಾಂಕೇರ್ (ಕೇವಲ 1,884 ಮತಗಳ ಅಂತರ), ರಾಜನಂದಗಾಂವ್, ಬಸ್ತಾರ್ ಸೇರಿದಂತೆ 5 ಕ್ಷೇತ್ರಗಳು; ರಾಜಸ್ಥಾನದ ಜೈಪುರ ರೂರಲ್ (ಕೇವಲ 1,615 ಮತಗಳ ಅಂತರ), ಕೋಟಾ, ಆಲ್ವಾರ್ ಸೇರಿದಂತೆ 5 ಕ್ಷೇತ್ರಗಳು; ಬಿಹಾರದ ಸಾರಣ್, ಅರಾರಿಯಾ, ಶಿಯೋಹರ್ ಕ್ಷೇತ್ರಗಳು; ಹರಿಯಾಣದ ಕುರುಕ್ಷೇತ್ರ, ಭಿವಾನಿ, ಗುರ್‌ಗಾಂವ್ ಕ್ಷೇತ್ರಗಳು; ಮಧ್ಯಪ್ರದೇಶದ ಮುರೈನಾ, ಭಿಂಡ್, ಗ್ವಾಲಿಯರ್ ಕ್ಷೇತ್ರಗಳು; ತೆಲಂಗಾಣದ ಮಹಬೂಬ್‌ನಗರ (4,500 ಮತಗಳ ಅಂತರ), ಮೆದಕ್, ಸಿಕಂದರಾಬಾದ್ ಕ್ಷೇತ್ರಗಳು; ಅಸ್ಸಾಂನ ಕರೀಮ್‌ಗಂಜ್ ಹಾಗೂ ಕೊಕ್ರಜಾರ್ (2 ಕ್ಷೇತ್ರಗಳು); ಅರುಣಾಚಲ ಪ್ರದೇಶದ ಅರುಣಾಚಲ ಈಸ್ಟ್ (1 ಕ್ಷೇತ್ರ); ಗುಜರಾತ್‌ನ ಪಟಾನ್ (1 ಕ್ಷೇತ್ರ) ಮತ್ತು ಕೇರಳದ ತ್ರಿಶೂರ್ (1 ಕ್ಷೇತ್ರ) ಹೀಗೆ ಒಟ್ಟು 79 ಕ್ಷೇತ್ರಗಳ ಫಲಿತಾಂಶ ಸಂಪೂರ್ಣವಾಗಿ ಈ ನಿಗೂಢ ಮತಗಳಿಂದಲೇ ಬದಲಾಗಿದೆ.

ಈ 79 ಕ್ಷೇತ್ರಗಳ ಮಸಲತ್ತಿನ ಮಹತ್ವ ಅಷ್ಟಿಷ್ಟಲ್ಲ. ಒಂದು ವೇಳೆ, ಈ ಕ್ಷೇತ್ರಗಳಲ್ಲಿ ಮತಗಳ ವ್ಯತ್ಯಾಸವಾಗದಿದ್ದರೆ, ಪ್ರಧಾನಿ ಮೋದಿ ಅವರು ಮತ್ತೆ ಎನ್‌ಡಿಎ ಸರ್ಕಾರವನ್ನೇ ರಚಿಸಲು ಸಾಧ್ಯವಾಗುತ್ತಿರಲಿಲ್ಲ ಎಂದು ವಿಎಫ್‌ಡಿ ಹೇಳಿದೆ. ಯಾಕೆಂದರೆ, ಕೇಂದ್ರದಲ್ಲಿ ಸರ್ಕಾರ ರಚನೆಗೆ ಬೇಕಾದ ಸರಳ ಬಹುಮತದ ಸಂಖ್ಯಾಬಲ 272. 2024ರಲ್ಲಿ ಎನ್‌ಡಿಎ ಮೈತ್ರಿಕೂಟ ಪಡೆದಿದ್ದು ಕೇವಲ 293 ಸೀಟುಗಳು. ಒಂದು ವೇಳೆ ಈ 79 ಕ್ಷೇತ್ರಗಳಲ್ಲಿ ಅಸಹಜವಾಗಿ ಪ್ರತ್ಯಕ್ಷವಾದ ಹೆಚ್ಚುವರಿ ಮತಗಳನ್ನು ತೆಗೆದುಹಾಕಿದ್ದರೆ, ಎನ್‌ಡಿಎ ಬಲವು 293ರಿಂದ ನೇರವಾಗಿ 214ಕ್ಕೆ ಕುಸಿಯುತ್ತಿತ್ತು. ಅಂದರೆ, ಸರಳ ಬಹುಮತದ 272ಕ್ಕ ಹೋಲಿಸಿದರೆ, ತೀರಾತಿ ತೀರಾ ಕಡಿಮೆ. ಇದರಿಂದ, ನರೇಂದ್ರ ಮೋದಿ ಅವರ ಸರ್ಕಾರವು ಬಹುಮತದ ಹತ್ತಿರಕ್ಕೂ ಹೋಗಲು ಸಾಧ್ಯವಾಗದೆ, ಅವರು ಅಧಿಕಾರದಿಂದಲೇ ಹೊರಬೀಳುತ್ತಿದ್ದರು!

ಈ ಇಡೀ ಪ್ರಕ್ರಿಯೆಯಲ್ಲಿ ಚುನಾವಣಾ ಆಯೋಗವು ನಡೆದುಕೊಂಡ ರೀತಿ ಪ್ರಜಾಪ್ರಭುತ್ವಕ್ಕೆ ಮಾರಕವಾದ ರೀತಿಯಲ್ಲಿದೆ. ಮೊದಲ ಹಂತದ ಅಂತಿಮ ಮತದಾನದ ದತ್ತಾಂಶ ನೀಡಲು ಆಯೋಗ ಬರೋಬ್ಬರಿ 11 ದಿನಗಳ ಕಾಲ ವಿಳಂಬ ಮಾಡಿತು. ಇಡೀ 2277 ದಿನಗಳ ಚುನಾವಣಾ ಅವಧಿಯಲ್ಲಿ ಆಯೋಗ ನಡೆಸಿದ್ದು ಕೇವಲ ಎರಡು ಸುದ್ದಿಗೋಷ್ಠಿಗಳನ್ನು ಮಾತ್ರ! ಪ್ರತಿಯೊಂದು ಬೂತ್‌ನ ನಿಖರ ಲೆಕ್ಕವಿಡುವ ಫಾರ್ಮ್ 17 ಯನ್ನು ನೀಡಲು ನಿರಾಕರಿಸಿದ ಆಯೋಗವು, ಆಡಳಿತ ಪಕ್ಷದ ಉನ್ನತ ನಾಯಕರು ನಡೆಸಿದ ನಗ್ನ ದ್ವೇಷಪೂರಿತ ಭಾಷಣಗಳ ವಿರುದ್ಧ ಕಣ್ಣು ಮುಚ್ಚಿ ಕುಳಿತಿತ್ತು. ಅಂದರೆ, ಆಳುವವರಿಗೆ ಸಂಪೂರ್ಣ ಶರಣಾಗಿತ್ತು.

ಸ್ಥಳೀಯ ಮಟ್ಟದಲ್ಲಿ ನಡೆದ ಅಕ್ರಮಗಳಂತೂ ಸಾಕ್ಷಿ ಸಮೇತ ಸಿಕ್ಕಿಬಿದ್ದಿವು. ಮುಂಬೈ ನಾರ್ತ್ ವೆಸ್ಟ್ ಕ್ಷೇತ್ರದಲ್ಲಿ ಶಿವಸೇನಾ (ಶಿಂಧೆ) ಅಭ್ಯರ್ಥಿ ರವೀಂದ್ರ ವೈಕರ್ ಸೋಲಿನ ಸಾಧ್ಯತೆಗಳು ದಟ್ಟವಾಗಿದ್ದಾಗ, ಮತ ಎಣಿಕೆಯ 19ರಿಂದ 26ನೇ ಸುತ್ತಿನ ಪ್ರಕಟಣೆಯನ್ನು ತಡೆದು ಪೋಸ್ಟಲ್ ಬ್ಯಾಲೆಟ್‌ಗಳನ್ನು ಮರುಎಣಿಕೆ ಮಾಡಲಾಯಿತು. ಅಂತಿಮವಾಗಿ, ರವೀಂದ್ರ ಅವರು ಕೇವಲ 48 ಮತಗಳಿಂದ ಗೆದ್ದರು.

ಇನ್ನು, ಉತ್ತರ ಪ್ರದೇಶದ ಫಾರೂಖಾಬಾದ್‌ನಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತರನ್ನು ಬೆದರಿಸಿ, ಒಂದೇ ವ್ಯಕ್ತಿ ಬಿಜೆಪಿಗೆ 8 ಬಾರಿ ಮತ ಹಾಕುವ ವಿಡಿಯೋ ವೈರಲ್ ಆದರೂ ಆಯೋಗ ಸುಮ್ಮನಿತ್ತು. ರಾಜಸ್ಥಾನದ ಜೈಪುರ ರೂರಲ್‌ನಲ್ಲಿ ನಿಯಮಬಾಹಿರವಾಗಿ 2,490 ಪೋಸ್ಟಲ್ ಬ್ಯಾಲೆಟ್‌ಗಳನ್ನು ತಿರಸ್ಕರಿಸಲಾಯಿತು. ಪರಿಣಾಮ, ಕಾಂಗ್ರೆಸ್ ಅಭ್ಯರ್ಥಿ ಕೇವಲ 1,615 ಮತಗಳಿಂದ ಸೋಲುಂಡರು.

ಅಂತೆಯೇ, ಅಸ್ಸಾಂನ ಕರೀಮ್‌ಗಂಜ್‌ನಲ್ಲಿ ಚಲಾವಣೆಯಾದ ಮತಗಳಿಗಿಂತ (11,37,538) ಎಣಿಕೆಯಾದ ಮತಗಳ ಸಂಖ್ಯೆಯೇ (11,40,349) ಬರೋಬ್ಬರಿ 3,811 ಮತಗಳಷ್ಟು ಹೆಚ್ಚಿತ್ತು! ಅಷ್ಟೇ ಏಕೆ, ಮತದಾರರ ಗೌಪ್ಯತೆ ಕಾಯುವ ಟೋಟಲೈಸರ್ ತಂತ್ರಜ್ಞಾನವನ್ನು ಮೋದಿ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ವಿರೋಧಿಸಿತು.

ಪ್ರಜಾಪ್ರಭುತ್ವದ ಮುಖವಾಡ ಧರಿಸಿದ ಸರ್ಕಾರ ಮತ್ತು ಅದರ ತಾಳಕ್ಕೆ ತಕ್ಕಂತೆ ಕುಣಿಯುತ್ತಿರುವ ಚುನಾವಣಾ ಆಯೋಗ ಸೇರಿ ದೇಶದ ಜನಾದೇಶವನ್ನೇ ಹೈಜಾಕ್ ಮಾಡಿವೆ ಎಂಬುದು ಈ ಪ್ರತಿಯೊಂದು ದತ್ತಾಂಶದಿಂದ ಸ್ಪಷ್ಟವಾಗುತ್ತದೆ. ಆದಾಗ್ಯೂ ಇದೇ ಸಂದರ್ಭದಲ್ಲಿ ಅಥವಾ 2024ರ ನಂತರ ಕೆಲವು ವಿಧಾನಸಭಾ ಚುನಾವಣೆಗಳಲ್ಲಿ ವಿಪಕ್ಷಗಳು ಗೆದ್ದಿವೆಯಲ್ಲ ಎಂಬ ಪ್ರಶ್ನೆ ಮೂಡಬಹುದು. ಅದಕ್ಕೆ, ರಾಜಕೀಯ ವಿಶ್ಲೇಷಕರು ಕ್ರಿಕೆಟ್ ಆಟವನ್ನು ಉದಾಹರಿಸುತ್ತಾರೆ. ಕ್ರಿಕೆಟ್ ಟೂರ್ನಿಯಲ್ಲಿ ಪ್ರತಿ ಆಟವನ್ನು ಅಥವಾ ಪ್ರತಿ ಬಾಲ್‌ಅನ್ನೂ ಫಿಕ್ಸ್ ಮಾಡಿಕೊಂಡಿರುವುದಿಲ್ಲ. ನಿರ್ದಿಷ್ಟ ಆಟ ಅಥವಾ ಬಾಲ್‌ಅನ್ನು ಫಿಕ್ಸ್ ಮಾಡಿಕೊಳ್ಳಲಾಗುತ್ತದೆ. ಉಳಿದವು ತಂತಾನೆ ನಡೆಯುವಂತೆ ನೋಡಿಕೊಳ್ಳಲಾಗುತ್ತದೆ. ಅಂತೆಯೇ, ಕೆಲವು ಚುನಾವಣೆಗಳನ್ನು ಬಿಜೆಪಿ ಬಿಟ್ಟುಕೊಟ್ಟು ಆಟ ಆಡುತ್ತಿದೆ. ಆದ್ದರಿಂದಲೇ, ಪಂಜಾಬ್, ಕೇರಳದಂತಹ ಕೆಲವು ರಾಜ್ಯಗಳಲ್ಲಿ ವಿಪಕ್ಷಗಳು ಗೆದ್ದಿವೆ.

ಹೀಗಿರುವ ಸಂದರ್ಭದಲ್ಲಿ, ಲೋಕಸಭಾ ಚುನಾವಣೆಯಲ್ಲಿ 5 ಕೋಟಿ ಅಸಹಜ ಮತಗಳ ಸೇರ್ಪಡೆ, 79 ಕ್ಷೇತ್ರಗಳ ಅಸಹಜ ಫಲಿತಾಂಶ ಹಾಗೂ ಆಯೋಗದ ನಿರಂಕುಶ ನಡವಳಿಕೆಯನ್ನು ಸ್ವತಂತ್ರ ತನಿಖೆಗೆ ಒಳಪಡಿಸಬೇಕು. ಇಲ್ಲದಿದ್ದರೆ, ಭಾರತದಲ್ಲಿ ಮತದಾನ ಎಂಬ ಪ್ರಕ್ರಿಯೆಗೆ ಯಾವುದೇ ಮೌಲ್ಯ ಉಳಿಯುವುದಿಲ್ಲ, ಪ್ರಜಾಪ್ರಭುತ್ವ ಎಂಬುದು ಕೇವಲ ಕಾಗದದ ಮೇಲಿನ ಶಬ್ದವಾಗಿ ಉಳಿಯುತ್ತದೆ. ಸರ್ವಾಧಿಕಾರಿಗಳು ದೇಶ ಆಳಲು ಮುಂದಾಗುತ್ತಾರೆ!

ಎಂಆರ್‌ಪಿಎಲ್ ಸ್ಫೋಟದ ಹಾನಿಯು ಕಂಪೆನಿ ಹೇಳುತ್ತಿರುವುದಕ್ಕಿಂತ ಹಲವು ಪಟ್ಟು ಗಂಭೀರವಾಗಿದೆ: ಸಿಪಿಐಎಂ

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಸುರತ್ಕಲ್ ಹತ್ತಿರದ ಜೋಕಟ್ಟೆ ಪ್ರದೇಶದಲ್ಲಿರುವ ಎಂಆರ್‌ಪಿಎಲ್‌ನಲ್ಲಿ ( ) ಭೀಕರ ಸ್ಫೋಟ ಸಂಭವಿಸಿದ್ದು ಈ ಘಟನೆ ಬೆನ್ನಲ್ಲೇ ಎಂಆರ್‌ಪಿಎಲ್ ಮತ್ತು ಸ್ಥಳೀಯ ಆಡಳಿತದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಈ ಸ್ಫೋಟವು ಕಂಪೆನಿಯ ನಿರ್ಲಕ್ಷ್ಯ, ದುರಹಂಕಾರ, ಜಿಲ್ಲಾಡಳಿತದ ಮೃದು ಧೋರಣೆ ಮತ್ತು ಜನಪ್ರತಿನಿಧಿಗಳ ಬೇಜವಾಬ್ದಾರಿತನದ ಪ್ರತಿಫಲನ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸಿಪಿಐಎಂನ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಹೇಳಿದೆ.

ಈ ಬಗ್ಗೆ ಸಿಪಿಐಎಂ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಮುನೀರ್ ಕಾಟಿಪಳ್ಳ ಪತ್ರಿಕಾ ಹೇಳಿಕೆ ನೀಡಿದ್ದಾರೆ. ''ಎಂಆರ್‌ಪಿಎಲ್‌ನ ಮೂರನೇ ಹಂತದ ಘಟಕದಲ್ಲಿ ನಡೆದಿರುವ ಸ್ಫೋಟ ಮತ್ತು ಅದರಿಂದಾದ ಹಾನಿಯು ಕಂಪನಿ, ಜಿಲ್ಲಾಡಳಿತ ನೀಡುತ್ತಿರುವ ವಿವರಣೆಗಳಿಗಿಂತ ಹಲವು ಪಟ್ಟು ಗಂಭೀರವಾಗಿದೆ. ಕಂಪೆನಿಯು ಸ್ಫೋಟದ ತೀವ್ರತೆಯನ್ನು ಎಂದಿನಂತೆ ಲಘುಗೊಳಿಸಲು ಯತ್ನಿಸುತ್ತಿದೆ'' ಎಂದು ದೂರಿದ್ದಾರೆ.

''ಈ ಹಿಂದೆಯೂ ಎಂಆರ್‌ಪಿಎಲ್‌ನಲ್ಲಿ ಹಲವು ಅವಘಡಗಳು ನಡೆದಿವೆ, ಪ್ರಾಣ ಹಾನಿ ಸಂಭವಿಸಿವೆ. ಪರಿಸರ ನಿಯಮ, ಸುರಕ್ಷತಾ ನಿಯಮಗಳನ್ನು ಸತತವಾಗಿ ಉಲ್ಲಂಘಿಸಲಾಗಿದೆ. ಆದರೆ ಕಂಪೆನಿಯ ನಿರ್ಲಕ್ಷ್ಯ, ದುರಹಂಕಾರದ ನಡೆ, ಕಂಪೆನಿಯ ನಿಯಮ ಉಲ್ಲಂಘನೆ ಕುರಿತಾಗಿ ಜಿಲ್ಲಾಡಳಿತದ ಮೃದು ಧೋರಣೆ ತೋರುತ್ತಿದೆ. ಜನಪ್ರತಿನಿಧಿಗಳು ಬೇಜವಾಬ್ದಾರಿಯಿಂದ ನಡೆಯುತ್ತಿದ್ದಾರೆ. ಇವೆಲ್ಲವೂ ಇಂದಿನ ಭೀಕರ ಸ್ಫೋಟಕ್ಕೆ ಕಾರಣ'' ಎಂದು ಸಿಪಿಐಎಂ ಆರೋಪಿಸಿದೆ.

''ಇಂದು ಸ್ಫೋಟ ಸಂಭವಿಸಿರುವ ಮೂರನೇ ಹಂತದ ಕೋಕ್ ಸಲ್ಫರ್ ಘಟಕವಂತೂ ನಿಯಮಗಳ ಉಲ್ಲಂಘನೆಗೆ ಕುಖ್ಯಾತವಾಗಿದೆ. ಕಡ್ಡಾಯ ಹಸಿರು ವಲಯ ಇಲ್ಲದೆ ಕಾರ್ಯಾಚರಿಸುತ್ತಿರುವ ದೇಶದ ಏಕೈಕ ಬೃಹತ್ ಕೈಗಾರಿಕಾ ಘಟಕ ಇದಾಗಿರಬಹುದು. ಈ ಘಟಕ ಕಾರ್ಯಾಚರಣೆ ಆರಂಭಿಸಿದ 2014ರಿಂದಲೂ ಸುತ್ತಲಿನ ಗ್ರಾಮಸ್ಥರ ಜೀವನದೊಂದಿಗೆ ಚೆಲ್ಲಾಟವಾಡುತ್ತಲೇ ಬಂದಿದೆ'' ಎಂದು ಆಕ್ರೋಶ ವ್ಯಕ್ತಪಡಿಸಿದೆ.

''ಜೋಕಟ್ಟೆ, ಕಳವಾರು ಗ್ರಾಮಗಳಂತೂ ಎಂಆರ್‌ಪಿಎಲ್‌ನ ಈ ಘಟಕದ ಮಾಲಿನ್ಯದಿಂದ ನರಕ ಸದೃಶ್ಯವಾಗಿದೆ, ಮಾರಕ ರೋಗಗಳ ಗೂಡಾಗಿದೆ. ಈ ಕುರಿತು 2016ರಲ್ಲಿ ಗ್ರಾಮಸ್ಥರ ಹೋರಾಟದ ಫಲವಾಗಿ ರಾಜ್ಯ ಸರ್ಕಾರ ಹೊರಡಿಸಿದ ಆರು ಅಂಶಗಳ ಆದೇಶವನ್ನು ಕಂಪೆನಿ ಜಾರಿಗೊಳಿಸದೆ ಸತಾಯಿಸುತ್ತಿದೆ. ಜಿಲ್ಲಾಡಳಿತವು ಸಂತ್ರಸ್ತ ಗ್ರಾಮಸ್ಥರ ಬದಲಿಗೆ ಕಂಪೆನಿಯ ಪರವಾಗಿ ಮೃದುಧೋರಣೆ ತಾಳುತ್ತಾ ಬಂದಿದೆ. ಕಂಪೆನಿಯ ಕುರಿತಾದ ದೂರುಗಳನ್ನು ನಿರ್ಲಕ್ಷಿಸುತ್ತಾ ಬಂದಿದೆ. ಇವೆಲ್ಲವುದರ ಪರಿಣಾಮ ಇಂದು ಸ್ಫೋಟ ಸಂಭವಿಸಿದೆ'' ಎಂದು ಸಿಪಿಐಎಂ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಆಪಾದಿಸಿದೆ.

ಹಾಗೆಯೇ, ಈಗಿನ ತೀವ್ರತರದ ಸ್ಫೋಟದ ಕುರಿತು ಪಾರದರ್ಶಕ ತನಿಖೆ ನಡೆಸುವಂತೆ, ಸಾರ್ವಜನಿಕರ ಮನೆ, ಕಟ್ಟಡಗಳಿಗೆ ಆಗಿರುವ ಹಾನಿಗೆ ಕಂಪೆನಿಯಿಂದ ಸೂಕ್ತ ಪರಿಹಾರ ಒದಗಿಸುವಂತೆ ಸಿಪಿಐಎಂ ಆಗ್ರಹಿಸಿದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR